ಜಾನಪದ ತಜ್ಞೆ

# ಶಾಂತಿ ನಾಯಕ

(ವ್ಯಕ್ತಿ ಪರಿಚಯ)



ಸುಮುಖಾನಂದ ಜಲವಳ್ಳಿ

# ಜಾನಪದ ತಜ್ಞೆ ಶಾಂತಿ ನಾಯಕ

(ವ್ಯಕ್ತಿ ಪರಿಚಯ)

ಸುಮುಖಾನಂದ ಜಲವಳ್ಳಿ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

**Janapada Thagne Shanthi Nayak-By Smukananda Jalavalli,**
Published by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054.
Phone : 080-23605033. Janapada Loka : 27201143.

ಪ್ರಥಮ ಮುದ್ರಣ : ೨೦೧೨ ಪುಟಗಳು : ೩೬

ಪ್ರತಿಗಳು : ೧೦೦೦

ಬೆಲೆ : **ರೂ. ೨೦** (ಇಪ್ಪತ್ತು ರೂಪಾಯಿಗಳು)

**ಹಕ್ಕುಗಳು : ಲೇಖಕರಿಗೆ ಸೇರಿವೆ**

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ಶ್ರೀ ಟಿ. ತಿಮ್ಮೇಗೌಡ** | ಅಧ್ಯಕ್ಷರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಸಹಸಂಪಾದಕರು |
| **ಡಾ. ರಾಜೇಗೌಡ ಹೊಸಹಳ್ಳಿ** | ಗೌರವ ಕಾರ್ಯದರ್ಶಿ |

ಮುದ್ರಕರು :

**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಸುಮುಖಾನಂದ ಜಲವಳ್ಳಿ** ಅವರು **ಶಾಂತಿ ನಾಯಕ** ಅವರನ್ನು ಕುರಿತು ವ್ಯಕ್ತಿ ಪರಿಚಯದ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಟಿ. ತಿಮ್ಮೇಗೌಡ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೫–೦೪–೨೦೧೨

# ಜಾನಪದ ತಜ್ಞೆ ಶಾಂತಿ ನಾಯಿಕ

ಜನಪದರ ಜೀವನದಲ್ಲಿ ಅವರದೊಂದು ಜೀವನ ಧರ್ಮ ರೂಪುಗೊಳ್ಳುತ್ತದೆ. ಹಸನಾದ ಬದುಕಿಗಾಗಿ ಸಮಾಜ ಜೀವನದಲ್ಲಿ ಅಳವಡಿಸಿಕೊಂಡ ಆಚರಣೆಯೇ ಅವರ ಧರ್ಮ ಅದು ಸಮಾಜಧರ್ಮ ಹಾಗೂ ಜೀವನ ಧರ್ಮ. ಅದು ಇಹಪರ ಲೋಕಗಳ ದಾರಿದೀಪ. ಅವರು ಸಾರುವ ಜೀವನ ಧರ್ಮದ ತತ್ವಗಳು ಹಾಡಾಗಿ ಹೊಮ್ಮಬಹುದು; ಕತೆಯಾಗಿ ನಲಿಯುಬಹುದು ಗಂಡು ಗಾದೆಯಾಗಿ ನಗಾರಿ ಹೊಡೆಯಬಹುದು..... ಹಲವು ಸಾವಿರ ವರ್ಷಗಳಿಂದ ಹದಗೊಳ್ಳುತ್ತ ಬಂದ ಅವರ ಜೀವನ ತತ್ವಗಳು ಸಮಾಜಿಕ ಲೋಪದೋಷಗಳನ್ನು ತಿದ್ದಿ ಮುಂದಿನ ಪೀಗಿಗೆಯನ್ನು ಉತ್ತಮ ಮಾರ್ಗದಲ್ಲಿ ಕೊಂಡೊಯ್ಯುವ ಶಕ್ತಿಗಳಾಗಿವೆ. ಕೆಲವು ಅಂದಂದಿನ ಜೀವನ ಮೌಲ್ಯಗಳನ್ನು ಎತ್ತಿ ಹಿಡಿದು ಇಂದಿನ ಜೀವನ ರೀತಿಗೆ, ಪರಿಸರಕ್ಕೆ ಹೊಂದಿಕೊಳ್ಳಲಾರದವಾರೂ ಎಲ್ಲವೂ ಹಾಗಲ್ಲ. ಅಂದು ಬೆಳಗಿದ ತತ್ವಗಳು ಇಂದಿಗೂ ಬೆಳಕನ್ನೀಯುವ ಶಕ್ತಿಯನ್ನು ಹೊಂದಿವೆ....' ಇದು ಜಾನಪದ ಸುಧಾ ಸಂಚಯದಲ್ಲಿ

ಜನಪದರ ಬದುಕಿಗೆ ಕಣ್ಣಾಗಿರುವ ಶಾಂತಿ ನಾಯಕರು ನುಡಿದ ಸಾರಭೂತ ನುಡಿ; ಕಟ್ಟಿದ ತೋರಣ ಸಾಹಿತ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಹಿಳೆಯರು ತೊಡಗಿಕೊಂಡರೂ ಜನಪದದಲ್ಲಿ ಮಾತ್ರ ಅವರ ಸಂಖ್ಯೆ ವಿರಳವೆ. ಆ ವಿರಳರ ಸಾಲಲ್ಲಿ ಹೊಳೆವ ಉಜ್ವಲ ಬೆಳಕು ಶಾಂತಿ ನಾಯಕರು. ಜನಪದರ ಒಡಲಿಂದಲೇ ಮೂಡಿ ಬಂದ ಅವರು ಈ ಕಡಲಲ್ಲಿ ಸಂಚರಿಸುವ ಹಡಗಾದುದು. ಕನ್ನಡಕ್ಕೆ ಕೊಡುಗೆಯೆ. ಆಧುನಿಕತೆಯ

ಪ್ರಭಾವದಿಂದ ಜನಪದರ ಬದುಕು ಒಂದೊಂದಾಗಿ ಮರೆಯಾಗುತ್ತಿರುವ ಸಂದರ್ಭದಲ್ಲಿ ಅವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಶಾಂತಿ ನಾಯಕರು ಮಾಡಿದ ದುಡಿಮೆ ಗಣನೀಯವಾದುದು. ಅಷ್ಟೇ ಅಲ್ಲ, ಜನಪದರ ನಡುವೆಯಿಟ್ಟ ಅವರ ಬದುಕನ್ನು ಕಟ್ಟುವುದರ ಕಡೆಗೆ ಕೊಟ್ಟ ಗಮನ ಮಾಡಿದ ಸೇವಾಕಾರ್ಯ ಜನಪದ ತಜ್ಞೆಯ ಜನಪರ ದೃಷ್ಟಿಗೆ ಉತ್ತಮ ನಿದರ್ಶನ.

**ಕುಟುಂಬದ ಹಿನ್ನೆಲೆ:**

ಅಂಕೋಲೆಯ ಬೇಲೇಕೇರಿ ಶಾಂತಿ ನಾಯಕರ ಹುಟ್ಟೂರು. ಉತ್ತರ ಕನ್ನಡದ ಅಂಕೋಲಾ ಸ್ವಾತಂತ್ರ್ಯ ಚಳವಳಿಗೆ ಹೆಸರಾದ ತಾಲೂಕು. ಇಲ್ಲಿಯ ಜನ, ಮುಖ್ಯವಾಗಿ ನಾಡವರು ಹೋರಾಟಕ್ಕೆ ಹೆಸರುವಾಸಿಯಾದವರು. ಸಮುದ್ರ ತೀರದ ಅಂಕೋಲ ಉಪ್ಪಿನ ಸತ್ಯಾಗ್ರಹದಲ್ಲಿ ಮಹತ್ವದ ಪಾತ್ರವಹಿಸಿ ಕರ್ನಾಟಕದ ದಂಡಿ ಎಂದೇ ಖ್ಯಾತವಾಗಿದೆ. ರೈತ ಚಳುವಳಿ, ಅರಣ್ಯ ಚಳವಳಿ, ಕರನಿರಾಕರಣೆ ಚಳವಳಿ– ಹೀಗೆ ಅನ್ಯಾಯದ, ದಬ್ಬಾಳಿಕೆಯ ಸರಕಾರದ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ದಿಟ್ಟ ವೀರರ ಪರಂಪರೆ ಇಲ್ಲಿದೆ. ಸತ್ಯ–ಧರ್ಮ, ನ್ಯಾಯ–ನೀತಿ, ಸ್ವಾಭಿಮಾನ–ಸ್ವಾವಲಂಬನೆ, ದೇಶ–ನಾಡು–ನುಡಿ, ಪ್ರೀತಿ–ಗೌರವ, ಸಮಾನತೆ– ಸಾಮರಸ್ಯ, ದಕ್ಷತೆ–ಕ್ರಿಯಾಶೀಲತೆ, ಜನಹಿತ ದೃಷ್ಟಿ–ಹೀಗೆ ಮೌಲ್ಯಗಳಿಗೆ ಆಕರವಾದವರು; ಉನ್ನತ ಬದುಕಿಗೆ ಕೊಡುಗೆಯಾದವರು. ಹೆಂಗಸರಿರಲಿ ಗಂಡಸರಿರಲಿ ರಾಷ್ಟ್ರಾಭಿಮಾನದಿಂದ ಹಸುರಾದವರು, ಹೆಸರಾದವರು.

ಶಾಂತಿ ನಾಯಕರ ತಾಯಿ ದೇವಮ್ಮ. ಹೆಚ್ಚು ಓದಿದವರಲ್ಲವಾದರೂ ಬದುಕಿನ ಅನುಭವದಿಂದ ಮಾಗಿದವರು. ಬಾಗಿದವರು. ದೇವಮ್ಮನವರ ತಾಯಿ, ದೊಡ್ಡಮ್ಮ ಚಿಕ್ಕಮ್ಮರೆಲ್ಲ ಜನಪದ ಹಾಡು, ಕತೆಗಳನ್ನು ಬಾಯಲ್ಲಿ ತುಂಬಿಕೊಂಡವರೆ ಮನೆ ಮದ್ದು ಬಲ್ಲವರೆ ತಂದೆ, ದೊಡ್ಡಪ್ಪ ಚಿಕ್ಕಪ್ಪ,

ಮಾವಂದಿರು-ಇವರೆಲ್ಲ ಸ್ವಾತಂತ್ರ್ಯ ಹೋರಾಟದಲ್ಲೇ ಬದುಕನ್ನು ಕಂಡವರು, ತ್ಯಾಗ, ಪರಿಶ್ರಮವನ್ನು ಪ್ರೀತಿಸಿದವರು.

ತಂದೆ ನಾರಾಯಣ ವೆಂಕಣ್ಣ ಕಲಗುಜ್ಜಿ. ಅಧ್ಯಾಪಕರಾಗಿ ಒಳಿತು ಮಾಡಿದವರು. ಗೋಕರ್ಣ ಸಮೀಪದ ತೊರ್ಕೆ ಅವರ ಸ್ವಂತ ಊರು. ಕಲಗುಜ್ಜಿ ಮನೆತನದ ಹೆಸರು. ಶಿಕ್ಷಕರಾಗಿ ಬೇಲೇಕೇರಿಗೆ ಬಂದ ಮೇಲೆ ಮುಂದೆ ಅದೇ ಅವರ ಊರಾಯಿತು. ಅವರು ಮಾಡಿದ ಶಿಕ್ಷಣ ಪ್ರಸಾರ ಕಾರ್ಯದಿಂದಾಗಿ ಬೇಲೇಕೇರಿಯಲ್ಲಿ ಇಂದಿಗೂ ಅವರ ಹೆಸರಿದೆ. ಐದನೇ ತರಗತಿಯವರೆಗೆ ಇದ್ದ ಶಾಲೆಯನ್ನು ಏಳನೇ ತರಗತಿಯವರೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಅವಾಗಿನ ಮುಲ್ಕಿ ಪರೀಕ್ಷೆಯಲ್ಲಿ ತಮ್ಮ ಶಾಲೆಗೆ ನೂರಕ್ಕೆ ನೂರು ಫಲಿತಾಂಶ ತಂದು ಕೊಟ್ಟ ಹೆಗ್ಗಳಿಕೆ ಇವರದ್ದು. ಕಲಿಕೆಯನ್ನು ಅರ್ಧಕ್ಕೆ ನಿಲ್ಲಿಸಿದ ಮಕ್ಕಳಿಗೆ ಇವರು ಕಾಯಕಲ್ಪ ಆದವರು. ಪರೀಕ್ಷಾ ಸಮಯದಲ್ಲಿ ಮಕ್ಕಳನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಅಭ್ಯಾಸ ಮಾಡಿಸಿ ಚೈತನ್ಯ ತುಂಬಿದವರು. ಜನಪರವಾಗಿ ಕೆಲಸ ಮಾಡಿ ಜನಮನ್ನಣೆ ಪಡೆದವರು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಿ ಅದೆಷ್ಟೊ ಮಕ್ಕಳ ಬಾಳಿಗೆ ಬೆಳಕಾದವರು ಅವರು. ತಮ್ಮ ಹೆಣ್ಣು ಮಕ್ಕಳನ್ನು ಅದೇ ಕಾಳಜಿಯಿಂದ ಬೆಳೆಸಿ ಸಮಾಜದಲ್ಲಿ ಸ್ವಾಭಿಮಾನದಿಂದ ಬದುಕುವ ಚೈತನ್ಯವನ್ನು ತುಂಬಿದವರು.

## ಬಾಲ್ಯ ಶಿಕ್ಷಣ ವೃತ್ತಿ:

ಶಾಂತಿ ನಾಯಕರು ಜನಿಸಿದು ೨೭-೦೩-೧೯೪೩ ರಲ್ಲಿ ಅವರ ಬಾಲ್ಯದ ಪರಿಸರ ಶಿಕ್ಷಣಕ್ಕೆ ಪೂರಕವಾಗಿತ್ತು. ತಂದೆಯವರ ಶಾಲೆಯಲ್ಲೇ ಅವರ ಪ್ರಾಥಮಿಕ ಶಿಕ್ಷಣ ಪೂರೈಸಿತು. ಪ್ರೌಢಶಿಕ್ಷಣ ಪಡೆಯಬೇಕಾದರೆ ಗುಡ್ಡ ಬೆಟ್ಟ ಹತ್ತಿ ಐದು ಕಿಲೋಮೀಟರ್ ದೂರದ ಅವರ್ಸಾದ ಕಾತ್ಯಾಯಿನಿ ಪ್ರೌಢಶಾಲೆಗೆ ಹೋಗಬೇಕು. ನಾರಾಯಣ ಕಲಗುಜ್ಜಿಯವರು ಮಗಳ ಈ ಶಿಕ್ಷಣಕ್ಕೆ ಅನುವು ಮಾಡಿಕೊಟ್ಟರು. ತಮ್ಮ ಊರಲ್ಲಿ ಎಸ್.

ಎಸ್. ಎಲ್. ಸಿ. ಮುಗಿಸಿದ ಮೊದಲ ಮಹಿಳೆ ಅವರು. ಮುಂದೆ ಸ್ನಾತಕ ಶಿಕ್ಷಣಕ್ಕಾಗಿ ಬಂದದ್ದು ಬೆಳಗಾವಿಗೆ, ಶ್ರೀ ಲಿಂಗರಾಜು ಮಹಾವಿದ್ಯಾಲಯಕ್ಕೆ ಮಾಸ್ತಿಯವರ ಹೋಳಿಗೆ ಕತೆ ಆ ದಿನಗಳಲ್ಲಿ ಅವರ ಮೇಲೆ ತುಂಬಾ ಪ್ರಭಾವ ಬೀರಿತು ಅಂತ ಅವರು ಹೇಳುತ್ತಾರೆ. ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಕುವೆಂಪುರವರ ವಿಮರ್ಶಾ ಲೇಖನಗಳು ಅವರಲ್ಲಿ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಮೂಡಿಸಿದ್ದವು ಪದವಿ ಪರೀಕ್ಷೆಯ ಫಲಿತಾಂಶ ಬರುವ ಮೊದಲೇ ಪ್ರೇಮಾ ಪಿಕಳೆಯವರು ಅಂಕೋಲಾದಲ್ಲಿ ಹೊಸದಾಗಿ ಆರಂಭಮಾಡಿದ ಗರ್ಲ್ಸ್ ಹೈಸ್ಕೂಲಿನಲ್ಲಿ ಶಿಕ್ಷಕಿಯಾಗಿ ಸೇರಿ ತಮ್ಮ ಅಧ್ಯಾಪನ ವೃತ್ತಿಗೆ ಅಡಿಯಿಟ್ಟರು. ಇಲ್ಲಿ ಸೇವೆ ಸಲ್ಲಿಸಿದ್ದು ಒಂದು ವರ್ಷ ಮಾತ್ರ, ೧೯೬೫ರಲ್ಲಿ ಡಾ। ಎನ್. ಆರ್. ನಾಯಕರೊಂದಿಗೆ ಮದುವೆಯಾಯಿತು. ಡಾ। ನಾಯಕರು ಹೊನ್ನಾವರದ ಎಸ್. ಡಿ. ಎಂ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಆದ ಕಾರಣ ಶಾಂತಿ ನಾಯಕರೂ ಹೊನ್ನಾವರಕ್ಕೆ ಬಂದರು. ಹೊನ್ನಾವರದ ಹೋಲಿ ರೋಸರಿ ಕಾನ್ವೆಂಟ್ ಶಾಲೆಯಲ್ಲಿ ಸ್ವಲ್ಪ ಸಮಯ ಶಿಕ್ಷಕಿಯಾಗಿ ಕೆಲಸ ಮಾಡಿದರು. ಇದು ತಾತ್ಕಾಲಿಕ ಹುದ್ದೆಯಾಗಿದ್ದು ಮುಂದೆ ೧೯೬೯ರಲ್ಲಿ ಕನ್ನಡದಲ್ಲಿ ಸ್ನಾತಕೋತರ ಪದವಿಯನ್ನು ಮುಗಿಸಿದರು ೧೯೭೧ರಲ್ಲಿ ಹೊನ್ನಾವರದ ಸಮೀಪದ ಕವಲಕ್ಕಿ ಗ್ರಾಮೀಣ ಪ್ರದೇಶದ ಸುಬ್ರಹ್ಮಣ್ಯ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿದರು. ಸ್ವಲ್ಪ ಸಮಯವೇ ಇಲ್ಲಿದ್ದರೂ ಕೂಡ ಅವರ ಜಾನಪದ ಪ್ರವೃತ್ತಿ ಆಸಕ್ತಿಗೊಂಡುದು ಈ ಕಾಲಾವಧಿಯಲ್ಲೆ– ಅದೂ ಗ್ರಾಮೀಣ ಈ ಪ್ರದೇಶದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ. ಆ ಸಂದರ್ಭವನ್ನು ಶಾಂತಿ ನಾಯಕರು ಹೀಗೆ ನೆನಪಿಸಿಕೊಳ್ಳುತ್ತಾರೆ. 'ಕವಲಕ್ಕಿ ಮತ್ತು ಕವಲಕ್ಕಿಯ ಸುತ್ತಮುತ್ತ ಹಳ್ಳಿಗಳಲ್ಲಿ ಜಾನಪದ ತುಂಭಿದೆಯೆಂಬುದು ನನಗೆ ಬಹುಬೇಗ ಕಂಡು ಬಂದಿತು. ಅಲ್ಲಿಯ ಚಿಕ್ಕ ಚಿಕ್ಕ ಶಾಲಾ ಮಕ್ಕಳಂತೂ ಜಾನಪದ ಗಣಿ. ಇತರ ಶಿಕ್ಷರು ರಜೆ ಹಾಕಿದಾಗ ಅವರ

ಅವಧಿಯಲ್ಲಿ ವಿದ್ಯಾರ್ಥಿಗಳನ್ನು ನೋಡಿಕೊಳ್ಳುವ ಪಾಳಿ ನನಗೆ ಬರುತ್ತಿತ್ತು. ಆಗ ನಾನು ಜಾನಪದ ಕತೆಗಳನ್ನು ಹೇಳಲು ಅವರನ್ನು ಪ್ರೋತ್ಸಾಹಿಸುತ್ತಿದ್ದೆ. ವಿದ್ಯಾರ್ಥಿಗಳನ್ನು ಎರಡು ಗುಂಪು ಮಾಡಿ ಒಗಟುಗಳನ್ನು ಹೇಳಲು ಹೇಳುತ್ತಿದ್ದೆ. ಆಗ ನನಗೆ ಜಾನಪದವು ೧೫-೧೭ ರವರೆಗಿನ ಈ ಹದಿಹರೆಯದ ಮಕ್ಕಳಲ್ಲಿಯೂ ತಿಂಬಿಕೊಂಡಿದೆ ಎಂಬುದು ಗಮನಕ್ಕೆ ಬಂತು. ಇದನ್ನು ಸಂಗ್ರಹಿಸಬೇಕೆಂದು ಮನಸ್ಸು ಮಾಡಿದೆ'. ಮೊದಲ 'ಜಾಣೆ ಕನ್ನಡವ ತಿಳಿದ್ಹೇಳೆ' ಒಗಟುಗಳ ಈ ಸಂಗ್ರಹ ಕೃತಿಗೆ ಮೊದಲು ಪ್ರೇರಣೆ ಈ ವಿದ್ಯಾರ್ಥಿಗಳೇ ಗ್ರಾಮೀಣ ವಿದ್ಯಾರ್ಥಿಗಳೊಳಗಿನ ಪ್ರತಿಭಾಶಕ್ತಿಯನ್ನು ಹೊರದೆಗೆಯುವದರಲ್ಲಿ ಕುಶಲ ಅಧ್ಯಾಪಕಿಯಾದ ಶಾಂತಿ ನಾಯಕರ ಇದೇ ವಿದ್ಯಾರ್ಥಿಗಳಿಂದ ಜಾನಪದದ ಮತ್ತೊಂದು ಲೋಕ ಅನಾವರಣಗೊಳ್ಳುತ್ತದೆ.

ಅದು ಹೊಸ ಶಾಲೆಯಾದುದರಿಂದ ಚಿತ್ರಕಲಾ ಶಿಕ್ಷಕರು ಮತ್ತು ದೈಹಿಕ ಶಿಕ್ಷಕರು ನೇಮಕಗೊಂಡಿರಲಿಲ್ಲ. ಆ ಶಿಕ್ಷಕರು ಮಾಡಬೇಕಾದ ಪಾಠಾವಧಿ ಹೆಚ್ಚುವರಿಯಾಗಿ ಇವರ ಪಾಲಿಗೇ ಬಂದಿತು. ಮಕ್ಕಳನ್ನು ಹೊರಾಂಗಣಕ್ಕೆ ಕರೆದೊಯ್ದು ಅಲ್ಲಿ ಜಾನಪದ ಆಟಗಳನ್ನು ಆಡಿಸುತ್ತಿದ್ದರು. ಹಳ್ಳಿಯಲ್ಲಿ ತಾವಾಡುವ ಆಟಗಳ ಬಗ್ಗೆ ತಮ್ಮ 'ಅಕ್ಕೋರು' ಆಸಕ್ತಿ ವಹಿಸಿದ್ದು ಕಂಡು ಮಕ್ಕಳಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಆಟದ ಬಗ್ಗೆ ಆ ಮಕ್ಕಳೇ ಮಾಹಿತಿ ಕೊಡುತ್ತಿದ್ದರು. ಅಲ್ಲೇ ಶಾಂತಿ ನಾಯಕರು ಟಿಪ್ಪಣೆ ಮಾಡಿಕೊಳ್ಳುತ್ತಿದ್ದರು. ಆಟದ ಪ್ರತಿಯೊಂದು ಹಂತವನ್ನೂ ಮಕ್ಕಳು ಅಚ್ಚು ಕಟ್ಟಾಗಿ ವಿವರಿಸುತ್ತಿದರು. ಜನಪದ ಆಟಗಳ ಪ್ರಾತ್ಯಕ್ಷಿಕೆಗಳನ್ನು ಅಲ್ಲಿ ಅದ್ಭುತವಾಗಿ ನಡೆಯುತ್ತಿತ್ತಂತೆ ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು, ಕೃತ ಬೀಜಾಂಕುರವಾದದ್ದು ಇಲ್ಲಿಯೆ. ಜನಪದ ಆಟದ ಮಟ್ಟಿಗೆ ವಿದ್ಯಾರ್ಥಿ-ಶಿಕ್ಷಕಿ-ಇವರ ನಡುವಿನ ಅಂತರವನ್ನು ಅಳಿಸಿ ಹಾಕಿದವು. ಗುರುಶಿಷ್ಯರ ಸಂಬಂಧ ಅನ್ಯೋನ್ಯವಾಗುವುದಕ್ಕೆ ಇಂಥ ಸಂದರ್ಭಗಳು

ಹೇಗೆ ಕ್ರಿಯಾಶೀಲವಾಗುತ್ತವೆ ಎಂಬ ಅರಿವು ಶಾಂತಿ ನಾಯಕರಿಗೆ ಇಲ್ಲಿ ಮನದಟ್ಟಾಯಿತು. ಡಾ| ಎನ್. ಆರ್. ನಾಯಕರ ಸಹಕಾರದಲ್ಲಿ ೧೯೭೦ ರಲ್ಲೇ ಜನಪದ ಆಟಗಳ ಈ ಕೃತಿ ಪ್ರಕಟನೆಗೆ ಸಿದ್ಧವಾಯಿತು. ಆದರೆ ಕೊನೆಗದು ಪ್ರಕಟವಾದುದು ೧೯೭೭ ರಲ್ಲಿ ಆದರೂ ಜನಪದ ಆಟಗಳ ಕುರಿತ ಕನ್ನಡದಲ್ಲಿ ಪ್ರಕಟವಾದ ಮೊದಲ ಕೃತಿ ಎಂಬ ಹೆಗ್ಗಳಿಕೆ ಅದಕ್ಕೆ ಸಿಕ್ಕಿತು.

## ಶಿಕ್ಷಕಿಯಾಗಿ ಚೆನ್ನಕೇಶವ ಪ್ರೌಢಶಾಲೆಯಲ್ಲಿ:

ಕುಮಟಾದ ಕಮಲಾ ಬಾಳಿಗಾ ಶಿಕ್ಷಣ ಸಂಸ್ಥೆಯಲ್ಲಿ ಬಿ.ಎಡ್ ಮುಗಿಸಿದ ಮೇಲೆ ೧೯೭೩ ರಲ್ಲಿ ಕರ್ಕಿ ಚೆನ್ನಕೇಶವ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿದರು. ನಿವೃತ್ತಿಯ ತನಕ ಅಲ್ಲಿಯೇ ಸೇವೆ ಸಲ್ಲಿಸಿದರು. ೨೦೦೦ ರಲ್ಲಿ ಜುಲೈ ತಿಂಗಳಲ್ಲಿ ಆ ಶಾಲೆಯ ಮುಖ್ಯೋಪಧ್ಯಾಯಿನಿಯಾಗಿ ಶಾಲೆಯ ಚುಕ್ಕಾಣಿ ಹಿಡಿದರು. ಅಲ್ಲಿ ಅಧಿಕಾರಾವಧಿ ಒಂಬತ್ತು ತಿಂಗಳು ಮಾತ್ರ, ಆದರೆ ಅದು ಶಾಲೆಯ ಚರಿತ್ರೆಯಲ್ಲಿ ಮಹತ್ವದ ಸಂದರ್ಭ ಆವಾಗಲೇ ಶಾಲೆಗೆ ಐವತ್ತು ವರ್ಷ ಸುವರ್ಣ ಮಹೋತ್ಸವವನ್ನು ಆಚರಿಸುವ ಹೊಣೆಗಾರಿಕೆ ಶಾಂತಿ ನಾಯಕರ ಸುಪರ್ದಿಗೆ ಬಂದಿತು. ಅದನ್ನು ಸರಿಯಾಗಿಯೇ ನಿಭಾಯಿಸಿದರು. ಸ್ಮರಣ ಸಂಚಿಕೆಯೊಂದಿಗೆ ಅರ್ಥಪೂರ್ಣವಾಗಿ ಆಚರಿಸಿದರು. ಶಿಕ್ಷಣಾಭಿಮಾನಿಗಳನ್ನು ಭೇಟಿಯಾಗಿ ಶಾಲೆಗೆ ಸಹಕಾರವನ್ನು ಕೋರಿದರು. ದೊಡ್ಡ ಮೊತ್ತದ ನಿಧಿಯನ್ನು ಸಂಗ್ರಹ ಮಾಡಿ ಸುವರ್ಣ ಮಹೋತ್ಸವದ ಸ್ಮರಣಾರ್ಥ ಶಾಲಾಭಿವೃದ್ಧಿ ಯೋಜನೆಯನ್ನು ರೂಪಿಸಿದರು. ಜನರ ವಿಶ್ವಾಸಗಳಿಸಿದರೆ ಉತ್ತಮ ಕಾರ್ಯ ಹೇಗೆ ನೆರವೇರುತ್ತದೆ ಎಂಬುವುದಕ್ಕೆ ಮಾದರಿಯಾದರು.

ವಿದ್ಯಾರ್ಥಿಗಳಿಗಾಗಿ ಅವರ ಮಾತೃ ಹೃದಯ ಸದಾ ಮಿಡಿಯುತ್ತಿತ್ತು. ಅದು ಕೂಡ ಗ್ರಾಮಾಂತರದ ಶಾಲೆಯೆ. ಕರ್ಕಿಯ ಆಸುಪಾಸಿನ ಹಳ್ಳಿಗಳಿಂದ ಮಕ್ಕಳು ಶಾಲೆಗೆ ಬರುತ್ತಿದ್ದರು. ಮಧ್ಯಾಹ್ನದ ಊಟಕ್ಕೆ ಬುತ್ತಿ ತರುವುದಕ್ಕೆ

ಎಷ್ಟೋ ಮಂದಿ ಮಕ್ಕಳಿಗೆ ಕಷ್ಟವಾಗುತ್ತಿತ್ತು. ಬೆಳಗ್ಗೆ ಏನಾದರೂ ತಿಂದು ಬಂದರೆ ಮತ್ತೆ ಸಾಯಂಕಾಲವೇ ಮನೆಗೆ ಹೋಗಿ ಊಟ ಮಾಡುವುದು. ಮಧ್ಯಾಹ್ನ ಹಸಿದ ಹೊಟ್ಟೆ ಅನಿವಾರ್ಯವಾಗುತ್ತಿತ್ತು. ಈ ಹಸಿದ ಮಕ್ಕಳನ್ನು ಕಂಡಾಗ ಶಾಂತಿ ನಾಯಕರಿಗೆ ಕರುಳು ಚುರ್ರ್ ಆಗುತ್ತಿತ್ತು. ಆದರೆ ಅವರೂ ನಿಸ್ಸಾಹಾಯಕರೆ. ಒಬ್ಬ ಅಧ್ಯಾಪಕಿ ಮಕ್ಕಳಿಗೆಲ್ಲ ನಿತ್ಯ ಊಟ ನೀಡಲು ಸಾಧ್ಯವೆ? ಕೆಲವೊಮ್ಮೆ ತಾವು ತೆಗೆದುಕೊಂಡು ಹೋದ ಬುತ್ತಿಯನ್ನು ಮಕ್ಕಳಿಗೆ ಕೊಟ್ಟು ಬಿಡುತ್ತಿದ್ದರು. ಒಂದು ಬಿತ್ತಿ ಎಷ್ಟು ಮಕ್ಕಳಿಗೆ ಸಾಕು! ಆದರೂ ಆ ಮಕ್ಕಳು ಒಂದೊಂದು ತುತ್ತು ಹಂಚಿಕೊಂಡು ಅಷ್ಟರಲ್ಲೇ ತೃಪ್ತಿ ಪಡುತ್ತಿದ್ದರು. ಎಷ್ಟೋ ಸಾರಿ ಮಕ್ಕಳಲ್ಲಿ ಹಣ ಕೊಟ್ಟು ಬಾಳೆಹಣ್ಣು ತರಿಸಿ ಅವರ ಜೊತೆ ತಾವು ಸೇರಿಕೊಂಡು ತಿನ್ನುತ್ತಿದ್ದರು. ಆ ದಿನಗಳೆಲ್ಲ ಶಾಂತಿನಾಯಕರ ಪಾಲಿಗೆ ಮರೆಯಲಾರದ ಕ್ಷಣಗಳೆ. ಒಟ್ಟಿನಲ್ಲಿ ಸಾಮಾಜಿಕ ಕಳಕಳಿಯುಳ್ಳ ಯಶಸ್ವಿ ಅಧ್ಯಾಪಕಿ ಶಾಂತಿ ನಾಯಕರು ತಾವು ಮುಖ್ಯೋಪಾಧ್ಯಾಯಿನಿಯಾದ ಸಂದರ್ಭದಲ್ಲೇ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಮಾಡಿದರು. ಈಗ ಬಿಸಿಯೂಟ ಬಂದಿದೆ. ಶ್ರೀ ಚೆನ್ನಕೇಶವ ಸಹಕಾರಿ ವಿದ್ಯಾಸಂಘ, ಕರ್ಕಿ– ಇದು ಅರ್ಪಿಸಿದ ಪತ್ರದಲ್ಲಿ ಶಾಂತಿನಾಯಕರನ್ನು ಕುರಿತು 'ಇವರು ಗ್ರಾಮೀಣ ಪ್ರದೇಶದಲ್ಲಿರುವ ಈ ಶಾಲೆಗೆ (ದಿ: ೨೬–೦೭–೧೯೭೩) ಸೇರಿದಂದಿನಿಂದ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಯ ಕಡೆಗೆ ಗಮನವೀಯುತ್ತ ಬಂದಿದ್ದಾರೆ. ವಿದ್ಯಾರ್ಥಿ ಪಾಲಕರ ಜೊತೆ, ಪೂರ್ವ ವಿದ್ಯಾರ್ಥಿಗಳ ಜೊತೆ ಉತ್ತಮ ಸ್ನೇಹ ಬಾಂಧವ್ಯವನ್ನು ಬೆಳೆಸಿಕೊಂಡು ಅವರೆಲ್ಲರ ಗೌರವ ಪ್ರೀತಿಗೆ ಪಾತ್ರರಾಗಿದ್ದಾರೆ'. ಎಂಬುದಾಗಿ ಪ್ರಶಂಸಿಸಲಾಗಿದೆ. 'ಇಂಥವರು ತಮ್ಮ ಶಾಲೆಯಲ್ಲಿದ್ದರೆಂಬುದು ತಮಗೆ ಹೆಮ್ಮೆ ಎಂಬ ಬೆಲೆಯುಳ್ಳ ನುಡಿಗಳಿಂದ ಗೌರವಿಸಿದ್ದಾರೆ.

**ಸಮಾಜ ಸೇವಾ ಕಾರ್ಯ:**

ಶಿಕ್ಷಕ ವೃತ್ತಿಯ ಜೊತೆಗೆ ಸಮಾಜ ಸೇವೆಯಲ್ಲೂ ಶಾಂತಿ ನಾಯಕರು ಆಸಕ್ತರಾದವರು. ಆ ಸಮುಯದಲ್ಲಿ ವಯಸ್ಕರ ಶಿಕ್ಷಣಾಂದೋಲನ ಸಾಕ್ಷರತಾ ಕಾರ್ಯಕ್ರಮ ನಡೆಯುತ್ತಿತ್ತು. ಆಸಕ್ತ ಶಿಕ್ಷಕರಿಗೆ ವಿಶೇಷ ತರಬೇತಿಯನ್ನು ಕೊಡಲಾಗುತ್ತಿತ್ತು. ಹೊನ್ನಾವರದ ಆ ತರಬೇತಿ ತಂಡದಲ್ಲಿ ಶಾಂತಿ ನಾಯಕರೂ ಪಾಲ್ಗೊಂಡರು. ಶಿರ್ಸಿಯಲ್ಲಿ ಈ ತರಬೇತಿ ಕಾರ್ಯಕ್ರಮ ನಡೆಯುತ್ತಿತ್ತು. ಅಂದಿನ ತಹಶೀಲ್ದಾರ್ ಸುಬ್ರಾಯ ಕಾಮತರು ಈ ತಂಡದ ಉಸ್ತುವಾರಿಯಾಗಿದ್ದರು. ತರಬೇತಿ ಮುಗಿಸಿ ಬಂದ ಮೇಲೆ ಹಳ್ಳಿ ಹಳ್ಳಿಯನ್ನು ಸಂಚರಿಸಿ ಗ್ರಾಮೀಣ ಅನಕ್ಷರಸ್ಥರಿಗೆ ಅಕ್ಷರ ಜ್ಞಾನ ಕೊಡುವ ಕಾರ್ಯ ಆರಂಭವಾಯಿತು. ಹೊನ್ನಾವರದಲ್ಲಿ ಈ ಆಂದೋಲನ ಯಶಸ್ವಿಯಾಗುವುದರಲ್ಲಿ ಶಾಂತಿ ನಾಯಕರು ಮಹತ್ವದ ದುಡಿಮೆ ಮಾಡಿದರು. ಈ ಪರಿಶ್ರಮ ಸ್ವತಃ ಅವರಿಗೂ ಸಂತಸ ತಂದಿತು. ಗ್ರಾಮೀಣ ಮಹಿಳೆಯರ ಅಕ್ಷರ ಪ್ರೀತಿ ಇವರ ಉತ್ಸಾಹವನ್ನು ಹೆಚ್ಚಿಸಿತು. ಅವರ ಜೀವನವನ್ನು ತಿಳಿದುಕೊಳ್ಳುವುದಕ್ಕೂ ಸಹಕಾರಿಯಾಯಿತು.

ಒಂದು ಕಡೆ ಅವರು ಉಲ್ಲೇಖಿಸುತ್ತಾರೆ. ಒಂದು ಮನೆಯಲ್ಲಿ ಸಾಕ್ಷರತಾ ಕಾರ್ಯಕ್ರಮ ನಡೆಯುತ್ತಿತ್ತು. ಏಳೆಂಟು ವರ್ಷದ ಹುಡುಗಿಯೊಬ್ಬಳು ಪಾಟಿ ಹಿಡಿದು ಬಂದಳು. ಓದಲು ಬರೆಯಲು ಸ್ವಲ್ಪ ಬರುತ್ತಿತ್ತು. ಆದರೆ ಅವಳ ಕಲಿಕೆ ನಿಂತೇ ಹೋಗಿತ್ತು. ಅಪ್ಪ ಅವ್ವ ಕೂಲಿ ಕೆಲಸಕ್ಕೆ ಹೋಗುವವರು. ನಾಲ್ಕೈದು ವರ್ಷದ ತಮ್ಮನನ್ನು ನೋಡಿಕೊಳ್ಳಲು ಈ ಮಗಳಿಗೆ ಒಪ್ಪಿಸಿದರು. ಹಾಗಾಗಿ ಇವಳಿಗೆ ಶಾಲೆ ಇಲ್ಲ. ಹಳ್ಳಿಯ ಹೆಣ್ಣು ಮಕ್ಕಳಿಗೆ ವಿದ್ಯೆ ಪಡೆಯಲು ಇರುವ ಸಮಸ್ಯೆ ಇದು. ಬಡತನ ನಿವಾರಣೆಯಾಗದು. ಒಂದರೊಳಗೊಂದು ಹೆಣೆದುಕೊಂಡ ಸಮಸ್ಯೆಯಿದು. ಸಾಕ್ಷರತಾ ಕಾರ್ಯಕ್ರಮ ಗ್ರಾಮೀಣರಿಗೆ ಎಷ್ಟು ಅಗತ್ಯವೆಂಬುದನ್ನು ಶಾಂತಿ ನಾಯಕರು ಮನದಂಡಿದ್ದರು. ಜಿಲ್ಲಾ ಸಂಪನ್ಮೂಲ ವ್ಯಕ್ತಿಯಾಗಿ ಈ

ಆಂದೋಲನವನ್ನು ಪ್ರಚಾರ ಪಡಿಸಿ ಜನರಲ್ಲಿ ಅದರ ಅರಿವು ಮೂಡಿಸುವ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಸಾಕ್ಷರರಿಗಾಗಿ ಸರಳ ಸಾಹಿತ್ಯವನ್ನು ರಚಿಸಿದರು. 'ಕುಡಿತ ನಿಮಗೆಷ್ಟು ಹಿತ'ದಂಥ ಸಾಮಾಜಿಕ ಸುಧಾರಣೆಯ ಅರಿವು ಮೂಡಿಸುವ ಕಿರು ಹೊತ್ತಗೆಗಳನ್ನು ಬರೆದು ಪ್ರಕಟಿಸಿದರು.

**ಸಮತಾ ವೇದಿಕೆ:**

ಮುಖ್ಯವಾಗಿ ಶಾಂತಿ ನಾಯಕರ ದೃಷ್ಟಿ ಹೊರಳಿದ್ದು ಗ್ರಾಮೀಣ ಸ್ತ್ರೀಯರ ಸಮಸ್ಯೆಗಳ ಕಡೆಗೆ ಗ್ರಾಮೀಣ ಮಹಿಳೆಯರಿಗೆ ತಮ್ಮ ಸಮಸ್ಯೆಗಳ ಬಗ್ಗೆ ಅರಿವಿಲ್ಲ. ತಮ್ಮ ಸ್ವಾತಂತ್ರ್ಯ ತಮ್ಮ ಸುಧಾರಣೆಗಳ ಬಗ್ಗೆ, ತಮ್ಮ ಹಕ್ಕು-ಕರ್ತವ್ಯಗಳ ತಿಳಿವಿಲ್ಲ. ಈ ಶೋಷಣಾ ಬದ್ಧ ವ್ಯವಸ್ಥೆಯೊಳಗೆ ಭಂಗಪಡುತ್ತ ಬದುಕುವುದೇ ತಮ್ಮ ಜೀವನ ಎಂದು ನಂಬಿದ್ದಾರೆ. ಇದರ ಜೊತೆಗೆ ಅನೇಕ ಅಂಥ ಶ್ರದ್ಧೆಗಳಿಗೆ ಜೋತುಬಿದ್ದಿರದಿಂದ ಇವರು ಬೆಳಕಿನೆಡೆಗೆ ಮುಖ ಮಾಡಬೇಕಾದರೆ, ಸ್ವಾವಲಂಭೊಗಳಾಗಿ ಸ್ವಾಭಿಮಾನದಿಂದ ಬಾಳಬೇಕಾದರೆ ವಿಚಾರ ಜಾಗೃತಿಯಾಗಬೇಕು. ಇದಕ್ಕೊಂದು ಸಂಘಟನೆ ಬೇಕು. ಸ್ತ್ರೀಯರೇ ಈ ಸಂಘಟನೆಗೆ ಮುಂದಾಗಬೇಕು–ಇದು ಶಾಂತಿ ನಾಯಕರು ಗ್ರಾಮೀಣ ಸ್ತ್ರೀಯರ ಬಗ್ಗೆ ಕಂಡುಕೊಂಡ ಸತ್ಯ.

ಸ್ತ್ರೀಯರಿಗೆ ಅವರ ಭಾವನೆಗಳನ್ನು, ವಿಚಾರಗಳನ್ನು, ಹೇಳು ಕೊಳ್ಳುವುದಕ್ಕೆ, ಅನುಭವವನ್ನು ಹಂಚಿಕೊಳ್ಳುವುದಕ್ಕೆ ಹೊಸ ವಿಷಯವನ್ನು ತಿಳಿಯುವುದಕ್ಕೆ ಸ್ವತಂತ್ರವಾದ ಒಂದು ವೇದಿಕೆಯ ಅಗತ್ಯವಿದೆ. ಎಂಬುವುದನ್ನು ತಹಶೀಲ್ದಾರ್ ಸುಬ್ರಾಯ ಕಾಮತರೂ ತಿಳಿದಿದ್ದರು. ಶಾಂತಿ ನಾಯಕರಲ್ಲಿ ಆ ಸಾಮರ್ಥ್ಯವಿದೆ ಅಂತ ಅವರು ತಿಳಿದಿದ್ದರು. ತಮ್ಮ ಸಾಕ್ಷರತಾ ಕಚೇರಿಯಲ್ಲೆ ಸಭೆ ಕರೆದು ಅದರ ನೇತೃತ್ವವನ್ನು ಶಾಂತಿ ನಾಯಕರಿಗೆ ಒಪ್ಪಿಸಿದರು. ಶಾಂತಿ ನಾಯಕರು ಸಮಾನಾಸಕ್ತ ಕೆಲವು ಮಹಿಳೆಯರೊಂದಿಗೆ ಸಮತಾ ವೇದಿಕೆಗೆ ತಳಪಾಯ ಹಾಕಿದರು. ಪ್ರಸಿದ್ಧ

ಸಮಾಜ ಸೇವಾ ಕರ್ಯಕರ್ತೆ ಮೈಸೂರಿನ ಮಹಿಳಾ ಪ್ರಗತಿಪರ ಸಂಘಟನೆಯ ಪದಾಧಿಕಾರಿ ಮೀರಾ ನಾಯಕರು ಈ ವೇದಿಕೆಯನ್ನು ಉದ್ಘಾಟನೆ ಮಾಡಿ ಚಾಲನೆಯಿತ್ತರು. ಹೊನ್ನಾವರದ ಪರಿಸರದಲ್ಲಿ ಮಹಿಳಾ ಜನಪರ ಚಾಟುವಟಿಕೆಗಳಿಗೆ ಸಮತಾ ವೇದಿಕೆ ಆಸರೆಯಾಯಿತು. ಅದಕ್ಕೆ ಚೈತನ್ಯವಾಗಿದ್ದವರು ಶಾಂತಿ ನಾಯಕರು.

**ಸಮತಾ ಪತ್ತಿನ ಸಹಕಾರಿ ಸಂಘ:**

ಆರ್ಥಿಕವಾಗಿ ನೋಡಿದರೆ ಗ್ರಾಮೀಣ ಮಹಿಳೆಯರು ಅಬಲೆಯರೆ. ಆರ್ಥಿಕ ಸ್ವಾವಲಂಭನೆಯಿಲ್ಲದೆ ಮಹಿಳೆಯರ ಉದ್ಧಾರವಿಲ್ಲ. ಹಣಕಾಸಿನ ವಿಷಯದಲ್ಲಿ ಗ್ರಾಮೀಣ ಸ್ತ್ರೀಯರು ಅಸಹಾಯಕರೆ. ಪ್ರತಿಯಿಂದು ವಿಷಯಕ್ಕೂ ಗಂಡನಲ್ಲಿಯೇ ಕೈಚಾಚಬೇಕು. ಹಳ್ಳಿಯಲ್ಲಿ ಕಾಣುವುದು ಬಡತನದ ಕುಟುಂಬವೆ. ಹಣದ ಅಗತ್ಯಕ್ಕೆ ಊರ ಸಾವುಕಾರನೇ ಗತಿ. ಅವರ ಅಸಲು-ಬಡ್ಡಿ ಕುತ್ತಿಗೆಗೆ ಪಾಶವೆ. ಒಂದು ಸಾರಿ ಈ ಉರುಳಿಗೆ ಕೊರಳೊಡ್ಡಿದರೆ ಮತ್ತೆ ತಪ್ಪಿಸಿಕೊಳ್ಳುವ ಮಾತಿಲ್ಲ. ದುಡಿತವೂ ನಿಲ್ಲುವುದಿಲ್ಲ. ಇದು ನಿತ್ಯಗೊಳಿನ ಕತೆ. ಇಂಥ ಸ್ಥಿತಿಯನ್ನು ಕಂಡಾಗ ಶಾಂತಿ ನಾಯಕರಿಗೆ ಮನಸ್ಸು ಮರುಗುತ್ತಿತ್ತು. ಇದಕ್ಕೇನು ಪರಿಹಾರ- ಇದು ಅವರ ನಿತ್ಯ ಚಿಂತನೆ. ಗ್ರಾಮೀಣ ಸ್ತ್ರೀಯರು ಆರ್ಥಿಕವಾಗಿ ಸ್ವಲ್ಪ ಮಟ್ಟಿಗಾದರೂ ಸ್ವಾವಲಂಬಿಗಳಾಗಬೇಕಾದರೆ ಏನು ಮಾಡಬೇಕು? ಈ ಪ್ರಶ್ನೆಗೆ ಅವರಿಗೆ ಉತ್ತರವಾಗಿ ಹೊಳೆದದ್ದು ಸಮತಾ ಪತ್ತಿನ ಸಹಕಾರಿ ಸಂಘ.

ಮಹಿಳೆಯರೇ ಇಂಥ ಒಂದು ಆರ್ಥಿಕ ಸಂಘಟನೆ ಮಾಡಿಕೊಳ್ಳುವುದಾದರೆ ಅದರ ನಿಯಮಾವಳಿಗಳೇನು ಸ್ವತಃ ಶಾಂತಿ ನಾಯಕರು ಕಾರವಾಕ್ಕೇ ಹೋಗಿ ಸಂಬಂಧಪಟ್ಟ ಅಧಿಕಾರಿಯನ್ನು ಕಂಡು ಈ ವಿಷಯುವನ್ನು ಪ್ರಸ್ತಾಪಿಸಿ ಅದರ ನಿಯಮಾವಳಿಗಳನ್ನು ತಿಳಿದುಕೊಂಡರು. ಮಹಿಳಾ ಸಬಲೀಕರಣ. ಮಹಿಳಾ ಆರ್ಥಿಕ ಸ್ವಾತಂತ್ರ್ಯದ

ಕುರಿತು ಹಳ್ಳಿ ಹಳ್ಳಿಯಲ್ಲಿ ಭಾಷಣ ಮಾಡುತ್ತಿದ್ದ ಶಾಂತಿ ನಾಯಕರಿಗೆ ಅದನ್ನು ಕಾರ್ಯರೂಪಕ್ಕೆ ತರಬೇಕೆಂಬ ಉತ್ಕಟೇಚ್ಛೆಯೂ ಇತ್ತು. ಈಗ ಅದು ನೆರವೇರಿತು. ಈ ಕಾರ್ಯದಲ್ಲಿ ಅವರಿಗೆ ಹೆಗಲು ಕೊಟ್ಟವರು ಕಮಲಾ ಭಟ್ಟರು–ಹೊನ್ನಾವರದಲ್ಲಿ ೧೯೯೫ ರಲ್ಲಿ ಸಮತಾ ಸಹಕಾರಿ ಸಂಘವೂ ಇದಾಯಿತು. ಈ ಕೀರ್ತಿಗೆ ಕಾರಣರು ಶಾಂತಿನಾಯಕರೆ.

ಈ ಸಂಘದಲ್ಲಿ ಮಾಡಿಕೊಂಡ ನಿಯಮಾವಳಿಗಳೂ ಮಹಿಳಾ ಜನಪರವಾಗಿಯೇ ಇರುವಂತೆ ನೋಡಿಕೊಳ್ಳಲಾಯಿತು. ಸಂಘದಲ್ಲಿ ಮಹಿಳಾ ಸಿಬ್ಬಂಧಿಗಳನ್ನೇ ನೇಮಕ ಮಾಡಿಕೊಳ್ಳಲಾಯಿತು. ಪಿಗ್ಮಿ ಸಂಗ್ರಹಕ್ಕೂ ಹೆಣ್ಣುಮಕ್ಕಳನ್ನೇ ಆಯ್ಕೆ ಮಾಡಿಕೊಳ್ಳಲಾಯಿತು. ಸಾಲಗಾರರಿಂದ ನಂತರ ಬಡ್ಡಿಯನ್ನು ತೆಗೆದುಕೊಳ್ಳವಾರದು ಎಂದು ನಿರ್ಧರಿಸಲಾಯಿತು. ಮಹಿಳೆಯರಿಗೆ ಐದು ಸಾವಿರದವರೆಗೆ ಸಣ್ಣ ಸಾಲ ಯೋಜನೆಯನ್ನು ಜಾರಿಗೆ ತರಲಾಯಿತು. ಇವೆಲ್ಲ ಶಾಂತಿ ನಾಯಕರ ಜನಪರ ದೃಷ್ಟಿಯ ಪರಿಣಾಮವೆ. ವಿಶೇಷವಾಗಿ ಮೀನುಗಾರ ಮಹಿಳೆಯರಿಗೆ ಇದರಿಂದ ಅನುಕೂಲವಾಯಿತು.

**ಭೂಮಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ. (ರಿ.) ಹೊನ್ನಾವರ:**

ಮಾತಿಗೆ ಮಾತು, ನೀತಿಗೆ ನೀತಿ ಇದು ಶಾಂತಿ ನಾಯಕರ ನಿಯತ್ತು. ಅವರು ಯಾರಿಗೂ ಸೊಪ್ಪು ಹಾಕುವವರಲ್ಲ ಯಾವುದಕ್ಕೂ ಧೈರ್ಯಗೆಡುವವರಲ್ಲ. ಅದಕ್ಕೊಂದು ಉದಾಹರಣೆ ಇಲ್ಲಿದೆ. ಸಮತಾ ಸಹಕಾರಿ ಪತ್ತಿನ ಸಂಘದಲ್ಲಿ ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು. ಮಹಿಳೆಯರು ಹೆಚ್ಚಿನ ಆಸಕ್ತಿ ತೋರಿದರು. ನಿರೀಕ್ಷೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಶೇರುಗಳು ಸಂಗ್ರಹವಾದವು. ಸಂಘದ ನಿಯಮಕ್ಕೆ ಬದ್ಧವಾಗಿ ವ್ಯವಹಾರ ನಡೆಯುತ್ತಿತ್ತು. ಅನೇಕ ಬಡಮಹಿಳೆಯರು ಇದರಿಂದ ಪ್ರಯೋಜನ ಪಡೆದರು. ಸಾಲ ಪಡೆದವರು ನಿಯತ್ತಾಗಿ ಅಸಲು–ಬಡ್ಡಿ ಕಟ್ಟುತ್ತಿದ್ದರು. ಹಣಕಾಸು ಬಲಗೊಂಡಿತು. ಸಂಘದ ಸೇವಾಕಾಂಕ್ಷಿಗಳಿಗೆ

ಸಿಟ್ಟಿಂಗ್ ಭತ್ತೆಯ ಮೇಲೆ ಕಣ್ಣು ಬಿತ್ತು. ಈ ಕುರಿತು ಚರ್ಚೆ ನಡೆಯಿತು. ಶಾಂತಿ ನಾಯಕ ಸುತಾರಾಮ್ ಅದಕ್ಕೆ ಒಪ್ಪಲಿಲ್ಲ. ಬಡವರು ತಮ್ಮ ಸಾಲಕ್ಕೆ ಕಟ್ಟಿದಬಡ್ಡಿ ಅದು ಅವರ ರಕ್ತ. ಆ ಹಣವನ್ನು ತಮ್ಮ ತಿಂಡಿ ತೀರ್ಥ, ಸಿಟ್ಟಿಂಗ್ ಭತ್ತೆಗೆ ಬಳಸಿಕೊಂಡು ಖರ್ಚು ಮಾಡುವುದು ತಪ್ಪು ಎಂದು ವಾದಿಸಿದರು. ಆದರೆ ಉಳಿದವರಿಗೆ ಈ ಮಾತು ಹಥ್ಯವಾಗಲಿಲ್ಲ. ಬಹುಮತಕ್ಕೆ ಹಾಕಿ ಅವರು ತಾವೇ ಸೈ ಅನಿಸಿಕೊಂಡರು. ಸಮಾಜ ಸೇವಕರ ನಿಜವಾದ ಬಣ್ಣ ಬಯಲಾಯಿತು. ಶಾಂತಿ ನಾಯಕರು ಅಲ್ಲಿಂದ ಹೊರಬಂದರು. ಬಂದವರು ಸುಮ್ಮನಾಗಲಿಲ್ಲ. ಕ್ರಿಯಾಶೀಲ ಸ್ವಭಾವದವರಾದ ಅವರು ಮರುಕ್ಷಣವೇ ಭೂಮಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ಸಂಘವನ್ನು ಸ್ಥಾಪಿಸಿದರು. ಜನಪರ ಕಾರ್ಯದ ನಿರ್ಧಾರದಲ್ಲೇ ಪುನಃ ಕಾರ್ಯಪ್ರವೃತ್ತರಾದರು. ಅವರ ಸಾಮಾಜಿಕ ಚಟುವಟಿಕೆಗಳಿಗೆ ವಿಡುವು ಎಂಬುವುದೇ ಇಲ್ಲ. ಮಹಿಳಾ ಶೋಷಣೆಯ ವಿರುದ್ಧ ಶಾಂತಿ ನಾಯಕರ ಗಟ್ಟಿಧ್ವನಿ ಬರೀ ಭಾಷಣದಲ್ಲೇ ತೃಪ್ತರಾದವರಲ್ಲ. ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಮಾದರಿಯಾದವರು.

**ಬಹುಮುಖ ಸೇವೆ:**

೨೦೦೦ರಲ್ಲಿ ಅವರು ಶಿಕ್ಷಕ ವೃತ್ತಿಯಿಂದ ನಿವೃತ್ತರಾದದ್ದು ನಿಜ. ಅನೇಕ ಜವಾಬ್ದಾರಿಗಳು ಅವರನ್ನು ಕೈಬೀಸಿ ಕರೆದವು. ನಿವೃತ್ತಿ ಅವರ ಇನ್ನಷ್ಟು ಪ್ರವೃತ್ತಿಗಳಿಗೆ ಹೇತುವಾಯಿತು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸಸಸ್ಯೆಯಾಗಿ ಜಿಲ್ಲೆಯ ಕಲಾವಿದರಿಗೆ ನ್ಯಾಯ ಒದಗಿಸಿದರು. ಕರ್ನಾಟಕ ಜಾನಪದ ಪರಿಷತ್ತಿನ ಟ್ರಸ್ಟಿಯಾಗಿ ದುಡಿದರು. ಜನಶಿಕ್ಷಣ ಸಂಸ್ಥೆ ಮಂಡಳಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ, ಹೊನ್ನಾವರ ತಾಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆಯಾಗಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿದರು. ಹೊನ್ನಾವರ ತಾಲೂಕು ಸಾಹಿತ್ಯ

ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಾಹಿತ್ಯಪರ ಅನೇಕ ಚಟುವಟಿಕೆಗಳನ್ನು ಸಂಘಟಿಸಿ ನಾಡು-ನುಡಿ ಪ್ರಚಾರ ಮಾಡಿದರು. ಆಸರ, ಸಜ್ಜನ, ಉತ್ತರ ಕನ್ನಡ ಜಿಲ್ಲೆಯ ಸಣ್ಣ ಕತೆಗಳಂಥ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದರು. ಹೀಗೆ ಸಾಹಿತ್ಯ, ಸಾಂಸ್ಕೃತಿಕ, ಸಾಮಾಜಿಕ ನೆಲೆಯಲ್ಲಿ ಅವರದ್ದು ಸ್ಮರಣೀಯವಾದ ದುಡಿಮೆ. ಇವೆಲ್ಲ ಅವರೊಳಗೆ ತುಡಿಯುತ್ತಿರುವ ಜೀವಪರ ಕಾಳಜಿ.

**ಜಾನಪದದ ಕಡೆಗೆ:**

ಹೆಚ್ಚಾಗಿ ಜಾನಪದಕ್ಕೆ ವಾರಸುದಾರರೇ ಗ್ರಾಮೀಣ ಮಹಿಳೆಯರು. ಈ ವಾಹಿನಿ ಸದಾ ಅವರೊಳಗೆ ಅಂತರ್ಗತವಾಗಿದೆ. ಶಾಂತಿ ನಾಯಕರು ಈ ಗಂಗೆಯನ್ನು ತುಂಬಿಕೊಂಡೆ ಹುಟ್ಟಿ ಬೆಳೆದವರು. ಸ್ನಾತಕ-ಸ್ನಾತಕೋತ್ತರ ಅಧ್ಯಯನ ಪೂರೈಸಿದ ಮೇಲೆ ಅವರು ನಗರ ಜೀವನವನ್ನು ಅನುಭವಿಸುತ್ತ ಹಾಯಾಗಿ ಇರಬಹುದಿತ್ತು. ಆದರೆ ಜಿಲ್ಲೆಯ ಜಾನಪದ ಅವರನ್ನು ತನ್ನೆಡೆಗೆ ಸೆಳೆದುಕೊಂಡಿತು. ತನ್ನ ಮಡಿಲೊಳಗೆ ಈ ಮಗಳನ್ನು ತುಂಬಿಕೊಂಡಿತು. ಈ ಸಂಪತ್ತನ್ನು ದಾಖಲಿಸುವ ಮಹತ್ಕಾರ್ಯಕ್ಕೆ ತಮ್ಮನ್ನು ಅರ್ಪಿಸಿ ಕೊಂಡಿತು. ಈ ಸಂಪತ್ತನ್ನು ದಾಖಲಿಸುವ ಮಹತ್ಕಾರ್ಯಕ್ಕೆ ತಮ್ಮನ್ನು ಅರ್ಪಿಸಿ ಕೊಂಡುದು ಕನ್ನಡದ ಸಂಯೋಗವೇ ಆಯಿತು.

ಅಜ್ಜಿ ಹೇಳುತ್ತಿದ್ದ ಪಟ್ಟಣ ಸೆಟ್ಟಿಯ ಕತೆ ಅವರಿಗೆ ಈಗಲೂ ನೆನಪಿದೆ. ದಾಯಾದಿ ನೊಡ್ಡಪ್ಪ ಕವಿ ಸಣ್ಣಪ್ಪ ಗಾಂವಕರರು ಇವರಿಗೆ ಜಾನಪದ ದೀಕ್ಷೆ ಇತ್ತರು. ಹಳ್ಳಿಯ ಹಾಡಷ್ಟೆ ಸಂಗ್ರಹಯೋಗ್ಯವಲ್ಲ. ನಿತ್ಯ ಬಳಕೆಯ ಸಾವಿರಾರು ಶಬ್ದಗಳು ಮರೆಯಾಗುತ್ತಿವೆ ಅವುಗಳನ್ನು ದಾಖಲಿಸಲು, ಸಾಧ್ಯವಾದರೆ ಉಳಿಸಲು ಪ್ರಯತ್ನಿಸು ಎಂದು ಉಪದೇಶ ಮಾಡಿದರು. ಜಾನಪದದ ಆಸಕ್ತಿಗೆ, ಆ ಕುರಿತು ಕ್ರಿಯಾಶೀಲತೆಗೆ ಈ ಉಪದೇಶ ಸ್ಥಾಯಿಯಾಯಿತು. ಇನ್ನೊಬ್ಬ ಬಂಧು, ಸಾಹಿತಿ ಸದಾನಂದ ನಾಯಕರ ಮಾರ್ಗದರ್ಶನವೂ ಸಹಕಾರಿಯಾಯಿತು. ಪದವಿ ಕಾಲೇಜಿನಲ್ಲಿದ್ದಾಗ

ಕನ್ನಡ ಪ್ರಾಧ್ಯಾಪಕರಾಗಿದ್ದ ಡಾ। ಚಂದ್ರಶೇಖರ ಕಂಬಾರರು ಯಕ್ಷಗಾನದ ಕೋಡಂಗಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಇವರಿಗೆ ಹೇಳಿದರು. ಕೋಡಂಗಿ ವೇಷದಾರಿ ಹಮ್ಮಣ್ಣನಿಂದ ಮಾಹಿತಿ ಸಂಗ್ರಹಿಸಿದರು. ಇದು ಅವರ ಮೊದಲ ಕ್ಷೇತ್ರಕಾರ್ಯ. ೧೯೬೦ ರ ಸುಮಾರಿಗೆ ಜಾನಪದದಲ್ಲಿ ಪೂರ್ಣಾಸಕ್ತಿಯನ್ನು ಹೊಂದಿದರು. ನಿತ್ಯಬಳಕೆಯ ಅದೆಷ್ಟೋ ಶಬ್ದಗಳನ್ನು ಸಂಗ್ರಹ ಮಾಡತೊಡಗಿದರು. ತಾಯಿ ದೇವಮ್ಮ ಹೆಸರಾಂತ ಹಾಡುಗಾರ್ತಿಯಾಗಿದ್ದರು. ಗದ್ದೆನೆಟ್ಟ ಹಾಡು, ಬತ್ತಮೆರಿವ ಹಾಡು– ಇವನ್ನೆಲ್ಲ ಆ ತಾಯಿ ಏರು ಸ್ವರದಲ್ಲಿ ಹಾಡುತ್ತಿದ್ದರು. ತಾಯಿಯಿಂದ ನೂರಾರು ಹಾಡುಗಳನ್ನು ಸಂಗ್ರಹ ಮಾಡಿದರು. ಸಂಗ್ರಹ ಮಾತ್ರವಲ್ಲ ಆ ಸಾಹಿತ್ಯವನ್ನು ಮುಂದಿಟ್ಟುಕೊಂಡು ವಿಮರ್ಶೆಯನ್ನು ಬರೆಯುತ್ತಿದ್ದರು. ಸುಧಾದಂತಹ ಪತ್ರಿರಯಲ್ಲಿ ೧೯೬೪ ರಲ್ಲೇ ಇವರ ಜಾನಪದ ವಿಮರ್ಶಿಸಿ ಲೇಖನಗಳು ಪ್ರಕಟವಾಗುತ್ತಿದ್ದವು.

ಡಾ। ಎನ್. ಆರ್. ನಾಯಕರೊಂದಿಗೆ ಲಗ್ನವಾದ ಮೇಲೆ ಅವರ ಜನಪದ ಸಾಹಿತ್ಯ ಚಟುವಟಿಕೆ ಇನ್ನಷ್ಟು ಚುರುಕುಗೊಂಡಿತು. ಎನ್. ಆರ್. ನಾಯಕರೂ ಜನಪದ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿದ್ದರು. ಕಾರವಾರ ಜಿಲ್ಲೆಯ ಜನಪದ ಸಾಹಿತ್ಯದ ಮೇಲೆ ಅವರು ಸಂಶೋಧನೆ ಕೈಗೊಂಡಿದ್ದರು. ಹಾಗಾಗಿ ಜಿಲ್ಲೆಯಲ್ಲಿ ಸಮಗ್ರವಾಗಿ ಜನಪದ ಸಾಹಿತ್ಯವನ್ನು ಸಂಗ್ರಹ ಮಾಡುವ ಜರೂರಿ ಇತ್ತು. ಈ ಕಾರ್ಯದಲ್ಲಿ ಪರಿಯೊಂದಿಗೆ ಬಹುಪಾಲು ಜವಾಬ್ದಾರಿ ತೆಗೆದುಕೊಂಡವರು ಶಾಂತಿ ನಾಯಕರೆ. ಮಹಿಳೆಯರಲ್ಲಿದ್ದ ಹಾಡು ಸುಲಭದಲ್ಲಿ ಹೊರಬರುವುದಿಲ್ಲ. ಮಹಿಳೆಯರೇ ಅಲ್ಲಿ ಜೊತೆಯಾದರೆ ನಿರಾಂತಕವಾಗಿ ಹಾಡು ಹೊರಬರುತ್ತದೆ. ಶಾಂತಿ ನಾಯಕರು ಹಳ್ಳಿಯ ಹಾಡುಗಾರ್ತಿಯರ ಮನೆ ಮನೆಗಳನ್ನು ಹುಡುಕಿಕೊಂಡು ಹೋದರು. ತಾವು ಕಲಿತವರು ಎಂಬ ಯಾವ ಬಹುಮಾನವನ್ನು ತೋರದೆ ಹಳ್ಳಿಯ ಹೆಂಗಸರೊಂದಿಗೆ ಹಳ್ಳಿಯವರಂತೆ

ಬೆರೆತರು. ಸಲುಗೆ ಬೆಳೆಸಿದರು. ಆ ಹಾಡುಗಾರ್ತಿಯರೂ ಇವರ ಸರಳತನವನ್ನು ತುಂಬಾ ಮೆಚ್ಚಿಕೊಂಡರು. ಯಾವ ಬಿಗೂಮಾನ, ನಾಚಿಕೆ ಇಲ್ಲದೆ ಮುಕ್ತ ಮನಸ್ಸಿನಿಂದ ತಾವು ಬಲ್ಲ ಹಾಡುಗಳನ್ನು ಹಾಡಿದರು. ಶಾಂತಿ ನಾಯಕ ದಂಪತಿಗಳು ಅವನ್ನು ಬರೆದುಕೊಂಡರು. ಉತ್ತರ ಕನ್ನಡ ಜಿಲ್ಲೆ ನಿಜವಾಗಿ ಜಾನಪದ ಹಾಡಿನ ಕಣಜವೆ. ಈ ಕಣಜದಿಂದ ಅದೆಷ್ಟು ಕಾಳುಗಳನ್ನು ಹೊರಗೆ ತೆಗೆದರು. ಎಲ್ಲ ಬಗೆಯ ಹಾಡುಗಳಿಗೂ ಅಕ್ಷರ ರೂಪ ಕೊಟ್ಟರು. ಹತ್ತು ಸಾವಿರಕ್ಕೂ ಹೆಚ್ಚು ಪುಟಗಳನ್ನು ಪ್ರಕಟವಾಗಿದೆ. ಸಂಗ್ರಹ ಕಾರ್ಯದಲ್ಲಿ ಮಾತ್ರ ಶಾಂತಿ ನಾಯಕರದ್ದು ಬಹುಶ್ರಮವೆ. ಡಾ। ಎನ್. ಆರ್. ನಾಯಕರು ಇದನ್ನು ಹೆಮ್ಮೆಯಿಂದಲೇ ಒಪ್ಪಿಕೊಳ್ಳುತ್ತಾರೆ.

ಜಾನಪದ ಕಾರ್ಯದಲ್ಲಿ ಡಾ। ಎನ್. ಆರ್. ನಾಯಕರು ಮತ್ತು ಶಾಂತಿ ನಾಯಕರು ಒಟ್ಟಾಗಿಯೇ ಕೆಲಸ ಮಾಡಿದವರು. ಇದು ಶಾಂತಿ ನಾಯಕರದ್ದು, ಇದು ಎನ್. ಆರ್. ನಾಯಕರದ್ದು ಎಂದು ಪ್ರತ್ಯೇಕಿಸಿ ಹೇಳುವುದು ಸುಲಭವಲ್ಲ. ಡಾ। ಎನ್. ಆರ್. ನಾಯಕರ ಕೃತಿಗಳಲ್ಲಿ ಶಾಂತಿ ನಾಯಕರ ಪರಿಶ್ರಮವಿದೆ. ಆದರೆ ತಮ್ಮ ಪತಿ ಜನಪದ ಸಾಹಿತ್ಯಕ್ಕೆ ಹೆಚ್ಚು ಪ್ರಾಧಾನ್ಯ ಕೊಟ್ಟು ಸಂಶೋಧನೆ ಮಾಡಿದರೆ ಶಾಂತಿ ನಾಯಕರು ತಾವು ಸಾಹಿತ್ಯೇತರ ಜಾನಪದಕ್ಕೆ ಹೆಚ್ಚು ಗಮನ ಕೊಟ್ಟರು.

ಜಾನಪದರ ಆಹಾರ ಪಾನೀಯ, ಅಡುಗೆಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಅವನ್ನು ಪುಸ್ತಕಗಳ ಮೂಲಕ ಸಂಘಟಿಸಿ ಪ್ರಾತ್ಯಕ್ಷಿಕೆಗಳ ಮೂಲಕ, ವಿವಿಧ ಬಗೆಯ ತುಂಬುಳಿ, ಪಾನಕ-ಅವನ್ನು ತಯಾರಿಸುವ ವಿಧಾನ, ಬಳಕೆ ಮುಂತಾದುವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಅಡುಗೆ ವಿಶೇಷಗಳನ್ನು ಸಂಗ್ರಹಿಸಿದ್ದಾರೆ. ಸಸ್ಯ ಜಾನಪದ ಕನ್ನಡಕ್ಕೆ ಅವರಿತ್ತ ಕೊಡುಗೆಯೆಂದರೆ ತಪ್ಪಲ್ಲ. ಜನಪದರ ಮನೆಮದ್ದುಗಳನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಜನಪದ ಸಸ್ಯ ಮತ್ತು ವೈದ್ಯ ಕ್ಷೇತ್ರದಲ್ಲಿ ಅಪೂರ್ವ ಕೆಲಸ ಮಾಡಿತ್ತಿದ್ದಾರೆ. ಜನಪದರಲ್ಲಿ

ಅಸಾಯದ ಅಂಚಿನಲ್ಲಿರುವ ಅನೇಕ ಔಷಧ ಸಸ್ಯಗಳನ್ನು ತಮ್ಮ ಮನೆಯ ಅವರಣದಲ್ಲೇ ನೆಟ್ಟು ಬೆಳೆಸಿದ್ದಾರೆ. ಜೀವ ಉಳಿಸುವ ಮರಗಳನ್ನು ಜೀವ ಉಳಿಸುವ ಕಳೆಗಳನ್ನು ಸಂಗ್ರಹಿಸಿ ಅವುಗಳ ಉಪಯೋಗ ಮಹತ್ವದ ಕುರಿತು ಸಂಶೋಧನೆ ನಡೆಸಿ ಅವುಗಳ ಕಾಳಜಿಯ ಬಗ್ಗೆ ಒತ್ತು ಕೊಟ್ಟಿದ್ದಾರೆ. ಕಾಡಿನ ಆಹಾರದ ಬಳಕೆಯ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದ್ದಾರೆ. ಕಾಡಿನ ಆಹಾರ ಸಸ್ಯಗಳ ಸುಸ್ಥಿರ ಬಳಕೆ ಮತ್ತು ರಕ್ಷಣೆ ಬಗ್ಗೆ ಮಹಿಳೆಯರಿಗೆ ಮತ್ತು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮಗಳನ್ನು ಸಂಘಟಿಸಿದ್ದಾರೆ. ಮಹಿಳೆಯರಿಗೆ ಮತ್ತು ಮಕ್ಕಳಿಗೆ ಮನೆಮದ್ದುಗಳ ತಯಾರಿಕೆಯ ಪರಿಚಯ ಮಾಡಿಸಿದ್ದಾರೆ. ಕರಾವಳಿ ಜಿಲ್ಲೆಗಳ ಜನಪದ ಪಾನೀಯ ಬೃಹತ್ ಕಾರ್ಯಕ್ರಮವನ್ನು ಸಂಘಟಿಸಿದ ಶ್ರೇಯಸ್ಸು ಶಾಂತಿ ನಾಯಕರದ್ದು. ೧೯೯೭ ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಬಂಡಿಹಬ್ಬಗಳ ಬಹುಮುಖ ದಾಖಲೀಕರಣ ಮಾಡಿರುವರು. ಕರ್ನಾಟಕ ಸರಕಾರದ ಜಾನಪದ ಸಂಪುಟ ಯೋಜನೆಯ ಸಂಪಾದಕ ಮಂಡಳಿಯ ಸದಸ್ಯೆಯಾಗಿರುವರು. ಕರ್ನಾಟಕ ಜಾನಪದ ಪರಿಷತ್ತಿನ ಟ್ರಸ್ಟಿಯಾಗಿ ಕಾರ್ಯ ನಿರ್ವಹಿಸುತ್ತಿರುವರು. ವಿವಿಧ ಜಾನಪದ ಸಮ್ಮೇಳನ, ವಿಚಾರ ಸಂಕಿರಣಗಳಲ್ಲಿ ೪೦ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಿರುವರು. ಸುಧಾ, ಪ್ರಜಾವಾಣಿ, ಉದಯವಾಣಿ, ಕನ್ನಡ ಪ್ರಭಾ, ತರಂಗ, ನುಡಿಜೇನು, ಸಕಾಲಿಕ, ಕರಾವಳಿ ಮುಂಜಾವು ಮೊದಲಾದ ಪತ್ರಿಕೆಗಳನ್ನು ಸುಮಾರು ಅರವತ್ತಕ್ಕೂ ಮಿಕ್ಕಿ ಜಾನಪದದ ಕುರಿತು ಲೇಖನಗಳನ್ನು ಪ್ರಕಟ ಮಾಡಿರುವರು.

ಶಾಂತಿ ನಾಯಕರ ಸಾಧನೆಗಳಲ್ಲಿ ಅತ್ಯಂತ ಗಣನೀಯವಾದುದು ಜಾನಪದ ಪ್ರಕಾಶನ ಸಂಸ್ಥೆ. ೧೯೮೩ ರಲ್ಲಿ ತಮ್ಮ ಪತಿಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಈ ಸಾಧನೆಯನ್ನು ಸ್ಥಾಪಿಸಿದರು. ಜಾನಪದಕ್ಕೆ ಸಂಬಂಧಿಸಿ ತಾವು ಸಾಂಗ್ರಹ ಮಾಡಿದ, ಸಂಶೋಧನೆ ಮಾಡಿದ ಅದೆಷ್ಟೋ ಗ್ರಂಥಗಳನ್ನು

ಪ್ರಕಟಿಸಬೇಕಾಗಿದೆ. ಪ್ರಕಟನೆಗಾಗಿ ಎಷ್ಟು ಅಂತ ಅವರಿವರ ಮುಖ ನೋಡುವುದು. ಬೇರೆಯವರಲ್ಲಿ ಅವಕಾಶಕ್ಕಾಗಿ ಕಾಯುವುದಕ್ಕಿಂತ ತಾವು ಸ್ವಾವಲಂಬಿಯಾಗುವುದೇ ಸೂಕ್ತ ಎಂಬುದಾಗಿ ಈ ದಂಪತಿಗಳು ನಿರ್ಧಾರಕ್ಕೆ ಬಂದರು. ಜಾನಪದ ಪ್ರಕಾಶನಕ್ಕೆ ರೂಪುಕೊಟ್ಟರು. ಈ ದಂಪತಿಗಳ ಪರಿಶ್ರಮ ಕಂಡು ಕೆಲವು ಮಹನೀಯರು, ಮಹಿಳೆಯರು ಸದಸ್ಯರಾಗಿ, ಪೋಷಕರಾಗಿ, ಮಹಾಪೋಷಕರಾಗಿ ಸಹಕರಿಸಿದರು. ಇದೀಗ ಐವತ್ತಕ್ಕೂ ಹೆಚ್ಚು ಪುಸ್ತಕಗಳು. ಈ ಪ್ರಕಾಶನದಿಂದ ಪ್ರಕಟಗೊಂಡಿದೆ.

ಪುಸ್ತಕ ಪ್ರಕಟನೆಯ ಜೊತೆಗೆ ಜಾನಪದ ದೀಪಾರಾಧನೆ ಕಾರ್ಯಕ್ರಮವನ್ನು ರೂಪಿಸಿದರು. ಪ್ರತಿವರ್ಷ ರಾಜ್ಯದ ಒಳಗೆ ಹೊರಗೆ ನಡೆಸುತ್ತ ಬಂದಿರುವ ಈ ಕಾರ್ಯಕ್ರಮ ಒಂದು ಅರ್ಥದಲ್ಲಿ ಜಾನಪದದ ಪ್ರಚಾರವೂ ಹೌದು. ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ, ಕಲಾವಿದರ ಸನ್ಮಾನ–ಹೀಗೆ ಬಹುಮುಖಿ ಕಾರ್ಯಕ್ರಮಗಳಿಂದ ಅಲ್ಲಲ್ಲಿ ಬೆಳಕು ಹಚ್ಚಿರುವರು. ಶಾಂತಿ ನಾಯಕರ ದಂಪತಿಗಳು ಜಾನಪದ ಹಾಡುಗಾರರನ್ನು, ಕಲಾವಿದರನ್ನು ಗೌರವದಿಂದ ಕಂಡವರು. ಆ ಗ್ರಾಮೀಣರನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುವುದಕ್ಕೆ ಮಾದರಿಯಾದವರು. ಎಲ್ಲಕ್ಕಿಂತ ಮಿಗಿಲಾಗಿ ಅವರ ಮೇಲೆ ಪ್ರೀತಿ ವಿಶ್ವಸವಿಟ್ಟು ಅವರ ಆದರಕ್ಕೆ ಪಾತ್ರರಾದವರು. ಇಂಥ ಪ್ರತಿಭಾವಂತರನ್ನು ಗುರುತಿಸಿ ಈ ದೀಪಾರಾಧನೆ ಕಾರ್ಯಕ್ರಮದಲ್ಲಿ ಸನ್ಮಾನಿಸುವ ಒಂದು ಸತ್‌ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರುವರು. ತಮ್ಮಲ್ಲಿರುವ ಸಂಪತ್ತು ಕಡಿಮೆಯೇನಲ್ಲ ಎಂಬ ಅರಿವನ್ನು ಸ್ವಾಭಿಮಾನ ಸ್ವಸಂತೋಷವನ್ನು ಆ ಜಾನಪದ ಬೆಳಕುಗಳಲ್ಲಿ ತುಂಬಿ ಧನ್ಯತೆಯ ಕ್ಷಣಗಳನ್ನು ನೀಡಿರುವರು.

ಜಾನಪದ ಪ್ರತಿಷ್ಠಾನ ಸ್ಥಾಪನೆ ಅದರ ಮುಂದಿನ ನಡಿಗೆಯಾಗಿದೆ. ಈ ಪ್ರತಿಷ್ಠಾನದ ಮೂಲಕ ಕುವೆಂಪು ದೀಪ ಪ್ರಶಸ್ತಿ, ಕಾರಂತ ದೀಪ ಪ್ರಶಸ್ತಿಯನ್ನು ಪ್ರಾಯೋಜಿಸಿರುವರು. ಈ ಮೂಲಕ ಸಾಹಿತ್ಯ ಸಾಧಕರನ್ನು

ಗುರುತಿಸಿ ಗೌರವಿಸುವ ಸತ್ಕಾರ್ಯರ ಮಾಡುತ್ತಿರುವರು. ಈ ಪ್ರತಿಷ್ಠಾನವನ್ನು ಜಾನಪದ ಸಂಶೋಧನಾ ಕೇಂದ್ರವನ್ನಾಗಿ ರೂಪಿಸಿವ ಉದ್ದೇಶ ಹೊಂದಿರುವರು. ಇದರ ಅಡಿಯಲ್ಲೇ ಶಾಂತಿ ನಾಯಕ ದಂಪತಿಗಳು ಕೈಗೊಂಡಿರುವ ಇನ್ನೊಂದು ಯೋಜನೆ ಜಾನಪದ ವಸ್ತು ಸಂಗ್ರಹಾಲಯ ನಿರ್ಮಾಣ. ಉತ್ತರ ಕನ್ನಡ ಜಿಲ್ಲೆಯ ಜನರ ಜೀವನ ವಿಧಾನವೆ ವಿಶಿಷ್ಟವಾದುದು. ಇಲ್ಲಿಯ ಜನಪದರು ಬಳಸುವ, ತಯಾರಿಸುವ ಜೀವನೋಪಯೋಗಿ ವಸ್ತುಗಳು ಬಹು ಅಪರೂಪದ್ದೆ. ಆದರೆ ಈಗ ಅವು ಬಳಕೆ ಒಂದೊಂದಾಗಿ ಕಣ್ಮರೆಯಾಗಿವೆ, ಆಗುತ್ತಲೂ ಇವೆ. ಕುಶಲ ಬದುಕಿನ ಜೀವಂತ ಸಾಕ್ಷಿಗಳಾದ ಈ ವಸ್ತುಗಳನ್ನು ಉಳಿಸಿಕೊಳ್ಳುವ ಕೆಲಸ ಜಿಲ್ಲೆಯಲ್ಲಿ ಬೇರೆ ಕಡೆ ಎಲ್ಲೂ ಕಂಡು ಬರುತ್ತಿಲ್ಲ. ಆ ಕೊರತೆಯನ್ನು ಶಾಂತಿ ನಾಯಕರ ಕುಟುಂಬ ಸ್ವಲ್ಪ ಮಟ್ಟಿಗಾದರೂ ಅವರ ಮಕ್ಕಳಾದ ಸವಿತಾ ನಾಯಕ, ರವೀಂದ್ರ ನಾಯಕ, ವಿವೇಕ ನಾಯಕರು ಪ್ರಸಾಧನ ಕಲೆಯ ಕುರಿತು ಸಂಶೋಧನೆ ಮಾಡಿರುವರು. ಈ ಕಾರ್ಯಕ್ಕೆ ಮೊದಲು ಮಾರ್ಗದರ್ಶನ ಶಾಂತಿ ನಾಯಕರ ತಮ್ಮ ಮನೆಯ ಮಾಳಿಗೆಯನ್ನೇ ಜಾನಪದ ವಸ್ತು ಸಂಗ್ರಹಾಲಯಕ್ಕೆ ಸಜ್ಜುಗೊಳಿಸಿರುವರು. ಉತ್ತರ ಕನ್ನಡ ಜಿಲ್ಲೆಯ ಎಲ್ಲ ಜನಪದರು ಬಳಸುತ್ತಿದ್ದ ಅಳತೆ ಪಾತ್ರೆ ಕೊಳಗ, ಸಿದ್ದಿ, ಕಳಸ, ಮೀನು ಹಿಡಿವ ಕುಳಿ, ಎರ್ಕುಳಿ, ಅಡುಗೆ ಪಾತ್ರೆಗಳು, ಸಟ್ಟುಗ, ತೆಳಿಮರ್ಗಿ, ಅನ್ನ ಬಾಗಿಸುವ ಮರ್ಸೆಟ್ಗಾ; ಕಣಜ, ಒಪ್ಪೊಳೆ, ಉಪ್ಪಿನಕಾಯಿ ಮರ್ಗಿ, ಭತ್ತ ತುಂಬಿಡುವ ಮಣ್ಣಿನ ಸರಗಲ, ನೀರು ತುಂಬುವ ಕೇಲು, ಅಕ್ಕಿಮುಡಿಕೆ, ಗ್ರಾಮೀಣರ ಆಡುವ ವಸ್ತುಗಳು, ತೊಟ್ಟಿಲು ಹೀಗೆ ಕಣ್ಮರೆಯಾಗಲಿರುವ ಅನೇಕ ವಸ್ತುಗಳನ್ನು ಅವರ ಸಂಗ್ರಹದಲ್ಲಿ ಕಾಣಬಹುದು. ಈ ಸಂಗ್ರಹ ದಿನೇ ದಿನೇ ಬೆಳೆಯುತ್ತಲೇ ಇದೆ. ಜಾನಪದದ ಮೇಲಿರುವ ಅವರ ಸಹಜ ಪ್ರೀತಿ–ಆಸಕ್ತಿಗೆ ಈ ಸಂಗ್ರಹ ಜ್ವಲಂತ ನಿದರ್ಶನ.

**ಸಾಹಿತ್ಯ ಕೃತಿಗಳು:**

ಶಾಂತಿ ನಾಯಕರು ಕನ್ನಡ ಜಾನಪದ ಕ್ಷೇತ್ರಕ್ಕೆ ಕೆಲವು ಅಪರೂಪದ ಕೃತಿಗಳನ್ನು ಇತ್ತಿದ್ದಾರೆ. ಇಂದು ಜಾನಪದ ವಿವಿಧ ನೆಲೆಯಲ್ಲಿ ಅಧ್ಯಯನಗೊಳ್ಳುತ್ತಿದೆ. ಆದರೆ ಶಾಂತಿ ನಾಯಕರ ಅಧ್ಯಯನದ ಬಗೆಯೇ ಬೇರೆ. ಜಾನಪದವನ್ನು ಪುನಃ ಬದುಕೆಗೆ ಮರಳಿಸುವ, ಬದುಕಿನೊಂದಿಗೆ ಒಂದುಗೂಡಿಸುವ ಪ್ರಯತ್ನ ಮತ್ತು ಕಾಳಜಿಯನ್ನು ಇಲ್ಲಿ ಕಾಣುತ್ತೇವೆ. ಸುಧಾರಣೆಯ ಕಡೆಗೆ ತಂತ್ರಜ್ಞಾನದ ಕಡೆಗೆ ನಡೆಯುತ್ತಿರುವ ನಾವು ಪುನಃ ಜಾನಪದದ ಕಡೆಗೆ ಹೊರಳುವುದು ಸರಿಯೇ ಎಂಬ ಪ್ರಶ್ನೆ ಮೂಡಬಹುದು. ಆದರೆ ಶಾಂತಿ ನಾಯಕರ ಪ್ರಕಾರ ಹಾಗಲ್ಲ. ಜಾನಪದ ಅನ್ನುವುದು ಬದುಕು. ಅದೊಂದು ಕೃತ್ಯಾವು ವ್ಯವಸ್ಥೆಯಲ್ಲ. ಪ್ರಕೃತಿಯ ಜೊತೆ ಜೊತೆಗೇ ಬೆಸೆದುಕೊಂಡು ಬಂದ ಜೀವನ ಪದ್ಧತಿ ಕೆಲವು ವ್ಯತ್ಯಾಸಗಳು ಅಲ್ಲಿ ಆಗುತ್ತಿದ್ದರೂ ಅಲ್ಲಿರುವ ಮೂಲಭೂತ ಅಂಶಗಳು ಮಾತ್ರ ಎಲ್ಲಕಾಲಕ್ಕೂ ಎಲ್ಲ ಜನಗಳಿಗೂ ಅಗತ್ಯವಿರುವಂಥವುಗಳೆ. ಅವನ್ನು ನಾವು ಮರೆಯುತ್ತ ಹೋದ ಹಾಗೆ ಶಾಂತಿ ನಾಯಕರು ಆ ಜೀವಧಾತುಗಳನ್ನು ನಮ್ಮ ಮುಂದೆ ತಂದಿಡುವ ಕೆಲಸ ಮಾಡುತ್ತಾರೆ. ಅವನ್ನು ಉಳಿಸಿಕೊಂಡು ಆರೋಗ್ಯವಂತರಾಗಿ ಬದುಕಿರಿ ಎಂಬ ಎಚ್ಚರವನ್ನು ನೀಡುತ್ತಾರೆ. ಜಾನಪದದಲ್ಲಿರುವ ಜೀವಸತ್ವಗಳನ್ನು ನಮಗೆ ಉಣಿಸುತ್ತಾರೆ. ಇವೆಲ್ಲ ಅವರ ಜೀವ ಪ್ರೀತಿಯ ಪರಿಣಾಮದಿಂದಲೇ ಸಂಭವಿಸಿದೆ. ಅದುದರಿಂದಲೇ ಅವರ ಚಿಕ್ಕ ಚಿಕ್ಕ ಕೃತಿಗಳಲ್ಲೂ ಜೀವಶಕ್ತಿ ತುಂಬಿ ತುಂಬಿ ಹರಿಯುತ್ತದೆ.

ಈ ತನಕ ಪ್ರಕಟವಾದ ಅವರ ಒಟ್ಟೂ ಕೃತಿ ಪುಸ್ತಕಗಳು ಮೂವತ್ತಕ್ಕೂ ಮೀರಿವೆ. ಇವನ್ನು ಜಾನಪದ ಕೃತಿ ವಿಷಯಿಕ ಕೃತಿಗಳು ಮತ್ತು ಜಾನಪದೇತರ ಕೃತಿಗಳು ಹಾಗೂ ಸಂಪಾದಕ ಕೃತಿಗಳು ಎಂಬುವುದಾಗಿ ವಿಂಗಡಿಸಬಹುದು. ಜಾನಪದ ವಿಷಯಿಕ ಕೃತಿಗಳನ್ನು (೧) ಜಾನಪದ ಸಂಗ್ರಹ ಕೃತಿಗಳು

(೨) ಜಾನಪದ ವಿಮರ್ಶಾ ಕೃತಿಗಳು ೩. ಜಾನಪದ ಅಡುಗೆ, ಆಹಾರ ಪಾನೀಯ ಕೃತಿಗಳು ೫. ಜಾನಪದ ಔಷಧೀಯ ಕೃತಿಗಳು ಹೀಗೆ ವಿಭಾಗಿಸಿಕೊಳ್ಳಬಹುದು. ಇದೊಂದು ಸ್ಥೂಲ ವಿಂಗಡನೆ.

## ಜಾನಪದ ವಿಷಯಿಕ ಕೃತಿಗಳು:

### ೧. ಜಾನಪದ ಸಂಗ್ರಹ ಕೃತಿಗಳು:

ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು, ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಕತೆಗಳು, ಜಾಣೆ ಕನ್ನಡವ ತಿಳಿದ್ಹೇಳೆ, ಮತ್ತು ಕಾಕಕ್ಕ ಗುಬ್ಬಕ್ಕ ಈ ನಾಲ್ಕು ಕೃತಿಗಳು ಇಲ್ಲಿ ಮುಖ್ಯವಾಗುತ್ತವೆ.

ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು: ಗ್ರಾಮೀಣರ ಆಟಗಳ ಕುರಿತು ಕನ್ನಡದಲ್ಲಿ ಪ್ರಕಟವಾದ ಮೊದಲ ಕೃತಿ. ಡಾ। ಎನ್. ಆರ್. ನಾಯಕರೊಂದಿಗೆ ಸೇರಿ ಶಾಂತಿ ನಾಯಕರು ಈ ಕೃತಿಯನ್ನು ಸಿದ್ಧಪಡಿಸಿರುವರು. ಉತ್ತರ ಕನ್ನಡ ಜಿಲ್ಲೆಯ ಮುಖ್ಯವಾಗಿ ಕರಾವಳಿಯ ಜನಪದರಲ್ಲಿ ಪ್ರಚಲಿತವಿದ್ದ ವಿವಿಧ ಬಗೆಯ ಆಟಗಳನ್ನು ಇಲ್ಲಿ ಸಂಗ್ರಹಿಸಿ ವಿವರಿಸಲಾಗಿದೆ. ಒಟ್ಟಿಗೆ ನೂರ ಮೂವತ್ತೆರಡು ಬಗೆಯ ಆಟಗಳು ಇಲ್ಲಿವೆ. ಇವನ್ನು ಹರಳಾಗಳು, ಬೆರಳಾಟಗಳು, ತುಳಿದಾಟಗಳು, ಸುತ್ತಾಟಗಳು, ಹುಡುಕಾಟಗಳು, ಕುಂಟಾಟಗಳು, ಎಳೆದಾಟಗಳು, ಗುರಿಯಾಟಗಳು, ಬೆನ್ನಟ್ಟುವ ಆಟಗಳು ಮತ್ತು ಅನುಕರಣದ ಆಟಗಳು– ಹೀಗೆ ಹತ್ತು ವಿಧಗಳಾಗಿ ವರ್ಗೀಕರಿಸಲಾಗಿದೆ. ಈ ವರ್ಗೀಕರಣದಲ್ಲಿ ಜನಪದ ಶಾಸ್ತ್ರೀಯತೆ ಹಾಗೂ ವೈಜ್ಞಾನಿಕತೆ ಕಂಡು ಬರುತ್ತದೆ. ಪ್ರತಿಯೊಂದು ಆಟಕ್ಕೂ ಆಡುವ ವಿಧಾನದ ಬಗ್ಗೆ ಸೂಕ್ತ ವಿವರಣೆಯನ್ನು ನೀಡಲಾಗಿದೆ. ಕೆಲವು ಆಟಗಳಿಗೆ ನಕ್ಷೆಯನ್ನು ಕೊಡಲಾಗಿದೆ. ಈ ರೇಖಾಚಿತ್ರಗಳು ಆಡುವ ನಮೂನಿಯನ್ನು ತಿಳಿಯಲು ಅನುಕೂಲವಾಗಿದೆ. ಗುಡ್ನಾಟ, ಹಳ್ಳಾಟ್‌ಅ, ದೇವರಾಟ, ಚೆನ್ನೆಆಟ, ಆನೆ ನಾಯಿ ಆಟ, ನೊಣ ತಿನ್ನುವ ಆಟ, ಅಂಡೆ ಉಂಡೆ ಆಟ, ಅಪ್ಪಳೇ ಮಾವಳೇ, ಚಟ್ಗೆಮುಟ್ಗೆ, ಕಾಲು

ಚೆಂಡಾಟ, ರಾಜಾಮಂತ್ರಿ ಕಳ್ಳ, ಅಂಗಾಳೆ ಬಿಂಗಾಳೆ, ಹಾಣೆಯಾಟ, ಗೋಲಿಯ ಆಟ, ಬೋರೆ ಆಟ, ಗೊವೆ ಜೀವದಾಟ, ಬೆಕ್ಕಿನಾಟ, ಹೊಲೆಆಟ, ಬಲೆಯಾಟ, ಕುಪ್ಪನ ಆಟ- ಇತ್ಯಾದಿ ಆಟಗಳ ಪರಿಚಯವಾಗುತ್ತದೆ. ಇವೆಲ್ಲ ಮನೆಯ ಜಗುಲಿಯಲ್ಲಿ, ಅಂಗಳದಲ್ಲಿ, ಬಯಲಲ್ಲಿ, ಬ್ಯಾಣದಲ್ಲಿ ರೂಪ ಪಡೆವ ಆಟಗಳು. ಈ ಆಟಗಳೆಲ್ಲ ಜಾನಪದರ ಜೀವನದ ಅವಿಭಾಜ್ಯ ಅಂಗವಾಗಿಯೇ ಬಂದಿವೆ. ಒಂದೊಂದು ಆಟವೂ ಒಂದೊಂದು ಅಧ್ಯಯನಕ್ಕೆ ಒಳಪಡುವ ಸತ್ವವುಳ್ಳದ್ದು. ಈ ಆಟಗಳು ದೇಹಕ್ಕೆ ವ್ಯಾಯಾಮ, ಮನಸ್ಸಿಗೆ ರಂಜನೆ ಮಾತ್ರ ಅಲ್ಲ, ಬುದ್ಧಿ ಕೌಶಲಗಳನ್ನು ಬೆಳೆಸುವ ಆರೋಗ್ಯವರ್ಧಕ ಗುಣಗಳನ್ನು ಹೊಂದಿವೆ. ಇಲ್ಲಿ ಗಂಡು ಮಕ್ಕಳ ಆಟಗಳೂ ಇವೆ, ಹೆಣ್ಣು ಮಕ್ಕಳ ಆಟಗಳೂ ಇವೆ ಇಬ್ಬರೂ ಒಟ್ಟಿಗೆ ಆಡುವ ಆಟಗಳೂ ಇವೆ. ಸುತ್ತ ಮುತ್ತಲೂ ಇರುವ ವಸ್ತುಗಳನ್ನೇ ಬಳಸಿಕೊಂಡು ಆಡುವ ಆಟಗಳು ಪ್ರಕೃತಿಯೊಂದಿಗಿನ ಒಡನಾಟವೂ ಹೌದು. ಇವೆಲ್ಲ ಒಂದು ಕಾಲಕಾಲಕ್ಕೆ ಸಂದು ಹೋದ ಆಟಗಳು ಎಂದು ಹೇಳುವಂತಿಲ್ಲ. ಯಾವ ಕಾಲಕ್ಕೂ ಯಾವ ಜನಕ್ಕೂ ಇವು ಹೊಂದಿಕೊಳ್ಳುವಂಥವುಗಳು. ಈ ಆಟಗಳಲ್ಲೂ ಸಾಂಸ್ಕೃತಿಕ ಕಾಳಜಿ ಇದೆ. ಇಂಥ ಆಟಗಳನ್ನು ನಮ್ಮ ಮಕ್ಕಳಿಗೆ ಒದಗಿಸಿಬೇಕು ಎಂಬ ಜರೂರಿಯನ್ನು ಈ ಕೃತಿ ಎತ್ತಿ ಹೇಳುತ್ತದೆ. ಮರೆತು ಹೋದ ಆಟಗಳಿಗೆ ಶಾಂತಿ ನಾಯಕರು ಇಲ್ಲಿ ಮರು ದಾಖಲೆ ಇತ್ತಿದ್ದಾರೆ. ಕನ್ನಡದ ಮಕ್ಕಳಿಗೆ ಉಪಹಾರ ಮಾಡಿದ್ದಾರೆ. ಪೀಠಿಕೆ ಸಾರಭೂತವಾಗಿದ್ದು ಒಂದು ಆಟಗಳ ಬಗ್ಗೆ ಒಂದು ವೈಜ್ಞಾನಿಕ ವಿಶ್ಲೇಷಣೆ ನೀಡಲಾಗಿದೆ. ಇಲ್ಲಿ ವಿವರಿಸಿರುವ ಆಟಗಳ ವಿವರಗಳನ್ನು ಓದಿದಾಗ ಉತ್ತರ ಕನ್ನಡ ಜಿಲ್ಲೆಯ ಜನರ ಸೃಜನಶೀಲತೆಯ ಪರಿಚಯವಾಗುತ್ತದೆ'. ಎಂಬುದಾಗಿ ಡಾ। ತೀ. ನಂ. ಶಂಕರನಾರಾಯಣರು ಈ ಗ್ರಂಥದ ಕುರಿತು ಹೇಳಿರುವ 'ಉತ್ತರ ಕನ್ನಡದ ಹವ್ಯಕರ ಜನಪದ ಕಥೆಗಳು' ೧೯೮೧ ರಲ್ಲಿ ಪ್ರಕಟವಾದ ಪುಸ್ತಕ. ಇದರಲ್ಲಿ

ಅರವತ್ತ ಮೂರು ಕತೆಗಳಿವೆ. ಉತ್ತರ ಕನ್ನಡದ ಪ್ರಮುಖ ಜನವರ್ಗಗಳಲ್ಲಿ ಹವ್ಯಕ ಜನವರ್ಗವು ಹೆಸರುಳ್ಳದ್ದೆ. ಈ ಜನವರ್ಗಗಳಲ್ಲಿ ಪ್ರಚಲಿತವಿರುವ ಕತೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇಪ್ಪತ್ತೊಂದು ಪುಟಗಳ ಪೀಠಿಕೆಯಲ್ಲಿ ಜನಪದ ಕತೆಗಳ ಕುರಿತು ಒಂದು ಅಧ್ಯಯನವನ್ನು ಒದಗಿಸಲಾಗಿದೆ. ಇಲ್ಲಿರುವ ಕತೆಗಳೆಲ್ಲ ಹವ್ಯಕ ಭಾಷೆಯಲ್ಲೆ ನಿರೂಪಿತವಾಗಿವೆ. ಪೀಠಿಕೆಯಲ್ಲಿ ಈ ಭಾಷೆಯ ಧ್ವನಿಯೂ ವ್ಯವಸ್ಥೆಯ ಬಗ್ಗೆ ಮಾಹಿತಿ ನೀಡಲಾಗಿದೆ. ಭಾಷಾವೈಶಿಷ್ಟ್ಯವನ್ನು ಅದರ ರೂಪಲಕ್ಷಣಗಳನ್ನು ವಿವರಿಸಲಾಗಿದೆ. ಕನ್ನಡ ಉಪಭಾಷೆಗಳ ತೌಲನಿಕ ಅಧ್ಯಯನಕ್ಕೆ ಇಂಥ ಪೀಠಿಕೆ ತುಂಬಾ ಸಹಕಾರಿ 'ಇವುಗಳನ್ನು ಅಭ್ಯಸಿಸಿ, ಮುಂದಿನ ಕತೆಗಳನ್ನು ಓದಿದಾಗ ಕಥೆಗಳಲ್ಲಿ ಗುಣಾತ್ಮಕ ರಚನೆ ಮತ್ತು ವಿಷಯಗಳನ್ನು ತಿಳಿಯಲು ಸಹಾಯಕವೂ ಆಗಬಹುಹುದು. ಇದು ಈ ಪುಸ್ತಕದ ಬಗ್ಗೆ ಬರೆದ ಡಾ। ಎಲ್. ಜಿ. ಭಟ್ಟ ಇವರ ಅಭಿಪ್ರಾಯ.

ಜಾಣ ಭಟ್ಟನ ಕಥೆ, ಗೊಂಡೇನ್ಗಡೆ, ಸಿರಿಯಕ್ಕನ ಕಥೆ. ಸೂರಾ ವಂದ್ ದನ್ವಾಮಲ್ಮಗ್ಳು, ಹೆರಿ ಹೆಣ್ತಿ ಕೂಸು, ದನಕಾಯ್ವಳ ಕಥೆ, ಇಣಚಿ, ಚಿತ್ರಾಟಿ ಕಾಳಣ್ಣ, ಕೊಡ್ರೆಮೀಸೆ ಕೊರ್ಲಿ ಗವ್ಡಾ, ಅತಿ ಆಸೆ, ಕುಂಟ ತಮ್ನ ಕತೆ, ಹೆರಿರಾಣಿ ಇತ್ಯಾದಿ ಕತೆಗಳು ಇಲ್ಲಿವೆ. ಇಲ್ಲಿನ ಹೆಚ್ಚಿನ ಕತೆಗಳು ಜಿಲ್ಲೆಯ ಇತರ ವರ್ಗದವರಲ್ಲಿಯೂ ಪ್ರಚಲಿತವಿದೆ. ಅಷ್ಟೇ ಅಲ್ಲ ಜಾಗತಿಕ ಜನಪದದಲ್ಲೂ ಇಂಥ ಆಶಯದ ಕತೆಗಳು ಇವೆ. ಯಾವ ಆಶಯಗಳು ಒಂದೇ ಆಗಿದ್ದರೂ ಕತೆಯ ನಡಿಗೆ ಮತ್ತು ನಿರೂಪಣೆಯಲ್ಲಿ ವೈವಿಧ್ಯವಿರುತ್ತದೆ. ಆ ಜನವರ್ಗದ ಜೀವನ ದೃಷ್ಟಿ ಅಲ್ಲಿ ಗೋಚರವಾಗುತ್ತದೆ. ಶಾಂತಿ ನಾಯಕರು ಸಂಗ್ರಾಹಿಸಿ ನಿರೂಪಿಸಿದ ಇಲ್ಲಿಯ ಕತೆಗಳಲ್ಲೂ ಅಂತಹ ವೈವಿಧ್ಯಗಳಿವೆ. ಹವ್ಯಕರ ಮನೋಭಾವವನ್ನು ಅರಿಯುವಲ್ಲಿ ಈ ಕತೆಗಳು ಸಂಹಕಾರಿಯಾಗಬಲ್ಲವು.

ಕಾಕಕ್ಕ ಗುಬ್ಬಕ್ಕ, ಜನಪದರ ಮುಖ್ಯವಾಗಿ ಮಕ್ಕಳ ಕಥಾ ಸಂಕಲನ.

ಇದರಲ್ಲಿ ಇಪ್ಪತ್ತನಾಲ್ಕು ಕತೆಗಳಿವೆ. ಇವೆಲ್ಲ ಚಿಕ್ಕ ಚಿಕ್ಕ ಕತೆಗಳು. ಮಕ್ಕಳ ಕಲ್ಪನೆಗಳಿಗೆ ಚಾಲನೆ ಕೊಡುತ್ತವೆ. ಅವರ ಭಾವನೆಗಳನ್ನು ರೂಪಿಸುತ್ತವೆ. ಮಕ್ಕಳ ಕುತೂಹಲಕ್ಕೆ ಮೆರಗು ಕೊಡುವ ಶಕ್ತಿ ಈ ಕತೆಗಳಿಗಿವೆ. ಅವರ ಮನಸ್ಸಿಗೆ ರಂಜನೆ ನೀಡಿ ಖುಷಿ ಕೊಡುವ ಗುಣ ಈ ಕತೆಗಳದ್ದು. ಈ ಕತೆಗಳ ಬಗ್ಗೆ ಬರೆದ ಡಾ। ವಿಠ್ಠಲ ಭಂಡಾರಿಯವರು ಇವುಗಳ ಲಕ್ಷಣಗಳನ್ನು ಗುರುತಿಸುತ್ತ, ಮಕ್ಕಳ ಬುದ್ಧಿ ಬೆಳವಣಿಗೆಗ, ಕಲ್ಪನೆಯ ವಿಸ್ತರಣೆಗೆ ಸಹಾಯಕವಾಗಿರುವಂತಹದು. ಎಂದಿದ್ದಾರೆ. ಜನಪದರಲ್ಲಿರುವ ಮಕ್ಕಳ ಕಾಳಜಿಗೆ ಈ ಕತೆಗಳೆಲ್ಲ ದಟ್ಟ ಪುರಾವೆ. ಶೈಕ್ಷಣಿಕ ಮೌಲ್ಯಗಳು ಈ ಕತೆಗಳಲ್ಲಿ ಎರಕಗೊಂಡಿವೆ. ಮಕ್ಕಳು ಪ್ರಾಣಿ ಪಕ್ಷಿ, ಗಿಡ ಮರ ಹೀಗೆ ಪ್ರಕೃತಿಯೊಂದಿಗೆ ಇಲ್ಲಿ ಸಾಮೀಪ್ಯ ಪಡೆಯುತ್ತಾರೆ. ಇದು ಪ್ರಕಟವಾದುದು ಜಾಣೆ ಕನ್ನಡವ ತಿಳಿದ್ಹೇಳೆ- ಇದು ಒಗಟುಗಳ ಸಂಗ್ರಹ ಕೃತಿ ಇದು ಪ್ರಕಟವಾದುದು ೧೯೮೨ ರಲ್ಲಿ ಇದರಲ್ಲಿ ಸುಮಾರು ಐನೂರರಷ್ಟು ಒಗಟುಗಳಿವೆ. ಗದ್ಯರೂಪದಲ್ಲಿ, ಹಾಡಿನ ರೂಪದಲ್ಲಿ ಮತ್ತು ಕತೆಯ ರೂಪದಲ್ಲಿ ಈ ಒಗಟುಗಳಿವೆ. ಆರಂಭದ ಪ್ರಸ್ತಾವನೆಯಲ್ಲಿ ಒಗಟುಗಳ ಬಗ್ಗೆ ಅತ್ಯುಪಯುಕ್ತವಾದ ಒಂದು ಅಧ್ಯಯನವಿದೆ. ಒಗಟುಗಳ ಮೂಲದ ಬಗ್ಗೆ ಚರ್ಚೆ ಮಾಡಲಾಗಿದೆ. ಒಗಟುವಿಗೆ ಸಂವಾದಿಯಾಗಿರುವ ಬೇರೆ ಬೇರೆ ಪದಗಳನ್ನು ಇಲ್ಲಿ ಗಮನಿಸಲಾಗಿದೆ. ಒಗಟಿನ ಅರ್ಥದಲ್ಲಿ ಕನ್ನಡವು ಬಳಕೆಯಾಗುತ್ತಿತ್ತು ಎಂಬುವುದಕ್ಕೂ ಇಲ್ಲಿ ಪುರಾವೆ ಸಿಗುತ್ತದೆ. ಆಧುನಿಕ ವಿಧಾನದಲ್ಲಿ ಈ ಒಗಟುಗಳನ್ನು ವಿಭಾಗ ಮಾಡಲಾಗಿದೆ. ಒಗಟುಗಳ ಅಧ್ಯಯನಕ್ಕೆ ಈ ವಿಭಾಗ ಕ್ರಮ ತುಂಬಾ ಅನುಕೂಲವಾಗಿದೆ. ಯಾವುದರ ಮೇಲೆ ಒಗಟು ಕಟ್ಟಲಾಗಿದೆಯೊ ಅದನ್ನು ಒತಟು ಎಂದು ಕರೆಯಲಾಗಿದೆ. ಈ ಒಗಟ್ಟುಗಳನ್ನು ಆಕಾಶ, ಭೂಮಿ ಎಂದೂ ಭೂಮಿಯನ್ನು ಚರ-ಅಚರ ಎಂದು ಅಚರವನ್ನು ಸಸ್ಯ ಸಸ್ಯೇತರ ಎಂದೂ ಸಸ್ಯೇತರವನ್ನು ಸ್ವಾಭಾವಿಕ, ಧಾರ್ಮಿಕ ಸಾಂಸಾರಿಕವೆಂದೂ ಸಾಂಸಾರಿಕವನ್ನು ಉಪಕರಣ

ಅಲಂಕಾರ, ಖಾದ್ಯವೆಂದೂ ವರ್ಗೀಕರಿಸಲಾಗಿದೆ. ಅದೇ ಕ್ರಮದಲ್ಲಿ ಒಗಟುಗಳನ್ನು ಜೋಡಿಸಲಾಗಿದೆ. ಜನಪದರ ನೀಡಿಯಲ್ಲೇ ಈ ಒಗಟುಗಳನ್ನು ಕೊಟ್ಟಿರುವುದರಿಂದ ಕನ್ನಡದ ಉಪಭಾಷಾ ತೌಲನಿಕ ಅಧ್ಯಯನಕ್ಕೆ ಇದು ಸಹಾಯಕ ನನ್ತಂದೆ ಚೀಲ್ದಲ್ಲಿ ದುದ್ತುಂಬಿದ್ದು ಲೆಕ್ಕ ಮಾಡೂಲಾಗ್ತಿಲ್ಲೆ (ತಾರಕ್ಲು) ಬಾ ಅಂದ್ರೆ ಬತ್ತಿಲ್ಲೆ ಹೋಗು ಅಂದ್ರೆ ಹೋಗ್ತಿಲ್ಲೆ (ಮಳೆ) ಒಂದಜ್ಜಿಗೆ ನೂರಾರ್ಚಂಪೆ (ಕೋಳಿ) ಕರಿಗುಡ್ಡಿ ಮನೆ ಕರಿದವಾ ಮೇಯ್ತುಂದೆ (ಹೇನು) ಸೂರ್ಯನ ಕಾಣದ ಗಂಗೆ, ಕುಂಬಾರನು ಮಾಡದ ಮಡಕೆ (ತೆಂಗು) ಹಸರಂಗಿ ಭಾವಾ ಯಾವಾಗ ಬತ್ತೆ; ಶಿವರಾತ್ರಿ ಮುಗಿಸಿ ನಿಮ್ಮೂರಿಗ್ಬತ್ತೆ (ಮಾವಿನ ಮುಡಿ) –ಇವೆಲ್ಲಾ ಗದ್ಯ ರೂಪದ ಒಗಟುಗಳು ಹಾಡಿನ ರೂಪದ ಒಗಟಿಗೆ ಒಂದು ಉದಾಹರಣೆ:

ನೀರಲ್ಲಿ ಹುಟ್ಟುವುದು ನೀರಲ್ಲಿ ಬೆಳೆಯುವುದು
ನೀರು ತಾಗಿದ ಕೆಡುವುದು– ಬೆಡಗೀನ
ಜಾಣೆ ಕನ್ನಡವ ತಿಳಿದ್ಹೇಳೆ– ಇದು ಒಗಟು; ಇದಕ್ಕೆ ಉತ್ತರ ಹೀಗೆ
ಕನ್ನಡವ ಹೇಳ್ವಲಿಕೆ ಇನ್ನು ಚೋದಿಗವೇನೆ
ಪಸ್ನಂಗದರನು ಶಿವಬಲ್ಲ– ನಾರ್ಯ್ರೋರ್ತಿಂಬಾ
ಉಪ್ಪಲ್ಲವೇನೆ ಹಸಿಯವ್ವೆ

ಹಾಗೆಯೆ ಕತೆಯ ರೂಪದಲ್ಲಿರುವ ಈ ಒಗಟನ್ನು ನೋಡಿ ಕತೆ ಎಂಬುದು ಎತೆಯಾಯ್ತು। ಬದುಕು ಮೂರ್ ಪಾಲಾಯ್ತು। ನಿನ್ನಾಗ್ ದೊಡ್ಡ್ ಮೊಲಾ ಸಾರಾಯ್ತು। ಮೊಲ ಹೊಡ್ದಂವ್ ಸತ್ ಮೂರ್ ತಿಂಗ್ಳಾಯ್ತು

ಹೆಂಡತಿಯ ಹಾದರವನ್ನು ಬಯಲು ಮಾಡುವ ಒಗಟು ಇದು ಆ ವಿಟವನ್ನು ಕೊಂದು ಹೆಂಡತಿಯನ್ನು ಉಳಿಸಿಕೊಳ್ಳುವ ಪ್ರಕ್ರಿಯೆಯನ್ನು ಈ ಒಗಟಿನಲ್ಲಿ ಕಾಣುತ್ತೇವೆ. ಅಂತೆಯೆ ಕೋಲಾಟದ ರೂಪದ ಒಗಟುಗಳೂ ಇಲ್ಲಿವೆ. ಒಟ್ಟಿನಲ್ಲಿ ಒಗಟುಗಳ ಬಹುರೂಪಗಳನ್ನು ಈ ಸಂಗ್ರಹ ಒಳಗೊಂಡಿದೆ.

ಈ ಒಗಟುಗಳೆಲ್ಲ ಜನಪದರ ಬುದ್ಧಿ ಕೌಶಲಗಳ ವಿಕಾಸಕ್ಕೆ ನಿದರ್ಶನವಾಗಿವೆ. ಅವರ ಕಲ್ಪನೆಗಳನ್ನೆ, ಯೋಚನೆಗಳಿಗೆ ಆಕರವಾಗಿವೆ. ಈ ಮೂಲಕ ಅವರು ತಮ್ಮ ಬದುಕಿನ ಸೊಗಸನ್ನು ಹೆಚ್ಚಿಸಿ ಕೊಂಡಿರುವರು. ಅವರ ಬದುಕಿನ ಆವರಣದೊಳಗೆ ಈ ಒಗಟುಗಳು ಮೂಡಿವೆ. ತಮ್ಮ ಅನುಭವಕ್ಕೆ ಹೊಳೆದ ಸತ್ಯಗಳನ್ನು ಈ ಮೂಲಕ ಉಳಿಸಿಕೊಂಡಿದ್ದಾರೆ. ಜನಪದ ಸಾಹಿತ್ಯದ ಪ್ರಮುಖ ಭಾಗವಾದ ಈ ಒಗಟುಗಳಲ್ಲಿ ಕಾವ್ಯಗುಣವೂ ತುಂಬಿದೆ. ನಮ್ಮ ಬದುಕಿಗೆ ಶಕ್ತಿ ನೀಡುವ, ಉಲ್ಲಾಸ ತುಂಬುವ ಸತ್ವ ಅವುಗಳಲ್ಲಿ ಇವೆ. ಈ ಕೃತಿಯ ಕುರಿತು ವಿಮರ್ಶೆ ಮಾಡಿದ ಡಾ। ಶಾಲಿನಿ ರಘುನಾಥ್ ಅವರು ಜನಪದರ ಕಲ್ಪನಾ ಚಾತುರ್ಯ, ಬುದ್ಧಿವಂತಿಕೆ, ಸೌಂದರ್ಯಪ್ರಜ್ಞೆ, ವ್ಯವಹಾರಿಕ ಜ್ಞಾನ- ಅನುಭವ ಇತ್ಯಾದಿಗಳನ್ನು ನಾವು ಅರಿಯ ಬಹುದಾಗಿದೆ... ಒಗಟಿನ ನಿರೂಪಣೆಯ ಸಾಧ್ಯತೆಗಳನ್ನು ಇಲ್ಲಿ ಸಮರ್ಥವಾಗಿ ದುಡಿಸಿಕೊಳ್ಳಲಾಗಿದೆ.... ಶಾಂತಿ ನಾಯಕರು ಸಂಗ್ರಹಿಸಿರುವ ಒಗಟುಗಳು ವಿಶೇಷ ಅಧ್ಯಯನ ಯೋಗ್ಯವೆನ್ನಿಸುತ್ತವೆ. ಎಂಬುದಾಗಿ ಪ್ರಶಂಸಿಸಿರುವರು.

**ಜನಪದ ವಿಮರ್ಶಾ ಕೃತಿಗಳು:**

ವಿವರಣೆ, ವಿಶ್ಲೇಷಣೆಯುಳ್ಳ ಲೇಖನಗಳ ಸಂಕಲನ 'ಜಾನಪದ ಸುಧಾ ಸಂಚಯ' ೧೯೮೩ ರಲ್ಲಿ ಪ್ರಕಟವಾದ ಹೊತ್ತಗೆ ಇದು. ಜನಪದ ವಿಷಯಿಕ ಹನ್ನೆರಡು ಲೇಖನಗಳು ಇಲ್ಲಿವೆ. ಮಳೆ ಪ್ರಕೃತಿಕವಾಗಿದ್ದರೂ ಮಳೆಯ ಮೇಲೇ ತಮ್ಮ ಬದುಕನ್ನು ಅವಲಂಬಿಸಿಕೊಂಡಿದ್ದ ಜನಪದರು ಮಳೆಯ ಪರಿಸರದ ಮೇಲೆ ತಮ್ಮ ಅನುಭವದ ಆವರಣದೊಳಗೆ ತಾವೇ ಕೆಲವು ನಂಬಿಕೆಗಳನ್ನು ರೂಪಿಸಿಕೊಂಡಿರುವರು. ಅಂತಹ ನಂಬಿಕೆಗಳನ್ನು ಜನಪದ ಸಾಹಿತ್ಯದಲ್ಲಿ ಮಳೆ ಬೆಳೆ ಲೇಖನದಲ್ಲಿ ವಿವರಿಸಿದ್ದಾರೆ. ಹೂಮಾಲೆ ನಡೆದು ಬಂದ ದಾರಿಯಲ್ಲಿ ಜನಪದರು ಹೂ ಮಾಲೆ ಮಾಡುವ ಬೇರೆ ಬೇರೆ ವಿಧಾನಗಳನ್ನು ಪರಿಚಯಿಸಿದ್ದಾರೆ. ಕತೆಗಳು ಗಾದೆಗಳಾಗಿ ಮೂಡಿ

ಬಂದ ಬಗೆಗಳನ್ನು 'ಗಾದೆ ಕತೆಗಳು' ಬರೆಹದಲ್ಲಿ ವಿಶ್ಲೇಷಿಸಿದ್ದಾರೆ. ಗಾದೆಗಳು ಜನಪದರ ಬದುಕಿನೊಟ್ಟಿಗೆ ಬೆಸೆದುಕೊಂಡು ಬಂದ ರೀತಿಯನ್ನು ಗಾದೆಗಳಲ್ಲಿ ಜಾನಪದರ ಜೀವನಧರ್ಮದಲ್ಲಿ ಅವಲೋಕಿಸಿದ್ದಾರೆ. ಒಗಟುಗಳ ಪ್ರಸ್ತುತತೆಯನ್ನು ಹಾಗೂ ಆಧುನಿಕ ಕಾಲದಲ್ಲೂ ಹೊಸ ಹೊಸ ವಸ್ತುಗಳ ಮೇಲೆ ಒಗಟುಗಳು ರಚನೆಗೊಳ್ಳುತ್ತಿರುವ ಅದರ ಜೀವಂತಿಕೆಯನ್ನು 'ಒಗಟುಗಳು' ಮತ್ತು 'ಆಧುನಿಕ ಒಗಟುಗಳು' ಲೇಖನಗಳಲ್ಲಿ ಸಮೀಕ್ಷಿಸಿದ್ದಾರೆ. 'ಎಲ್ಲಾಳೆಯ ಕಥೆ'ಯಲ್ಲಿ ಪತಿಯು ದುರುದ್ದೇಶಪೂರಿತವಾತಿ ಹೆಂಡತಿಯನ್ನು ವಿವಿಧ ಪರೀಕ್ಷೆಯ ನೆವದಲ್ಲಿ ಸಂಕಟಕ್ಕೊಳಪಡಿಸುವ ಕತೆ ಇದೆ. ಗವರಮ್ಮ ಬರುತಾಳೆ ತವರೀಗೆ ಹವ್ಯಕರಲ್ಲಿ ಪ್ರಚಲಿತವಿರುವ ಗೌರಿಯ ಕತೆ, ಮಳೆ ಬರಲೆಂದು ಹಾಲಕ್ಕಿ ಹೆಂಗಸರು ಮಾಡುವ ಆರಾಧನಾ ಕುಣಿತ ಬೆದ್ರುಂಡೆ ಕುಣಿತ ಇದರ ಉದ್ದೇಶ, ಕುಣಿತದ ಸಂದರ್ಭ ಮತ್ತು ವಿಧಾನಗಳನ್ನು ಇಲ್ಲಿ ನಿರೂಪಿಸಲಾಗಿದೆ. ಶವಸಂಸ್ಕಾರ ಪದ್ಧತಿಯಲ್ಲಿ ನಾಡವರಲ್ಲಿ ಸತ್ತವರ ಉತ್ತರ ಕ್ರಿಯೆ ನಡೆದ ವಿಧಾನವನ್ನು ವಿವರಿಸಲಾಗಿದೆ. ಬೇಸಿಗೆ ಪಾನೀಯಗಳು ಲೇಖನದಲ್ಲಿ ಜನಪದರ ಆಸರ ಪದ್ಧತಿಯನ್ನು ಹೇಳಲಾಗಿದೆ. ಚಿಕ್ಕ ಮಕ್ಕಳನ್ನು ಜನಪದ ತಾಯಂದಿರು ಆಡಿಸುವ ರೀತಿಯನ್ನು ಮಕ್ಕಳಾಟಗಳು ಲೇಖನದಲ್ಲಿ ಕೊಡಲಾಗಿದೆ. ಕರಾವಳಿಯ ಜನಪದರ ಕುರಿತು ಅನೇಕ ಮಾಹಿತಿಯನ್ನು ಈ ಕೃತಿ ನೀಡುತ್ತದೆ. ಪ್ರಾಥಮಿಕ ಮತ್ತು ಪರಿಚಯ ರೂಪದ ಲೇಖನಗಳಾದರೂ ನಿರ್ದಿಷ್ಟ ಪ್ರದೇಶ ಮತ್ತು ಪರಿಸರಕ್ಕೆ ಜಾನಪದ ಸಾಮಗ್ರಿಗಳನ್ನು ಸಂಗ್ರಹಿಸಿಕೊಡುವ ಮತ್ತು ಈ ಸಾಮಗ್ರಿಗಳ ಮೂಲಕ ಒಂದು ಸಂಸ್ಕೃತಿಗೇ ಸೇರಿದ ಜನರ ಆಲೋಚನೆಯ ಕ್ರಮಗಳನ್ನು ಶೋಧಿಸುವ ಕೆಲಸವನ್ನು ಶಾಂತಿ ನಾಯಕರು ಮಾಡಿದ್ದಾರೆ. ಇದು ಈ ಕೃತಿಯ ಕುರಿತು ಡಾ। ಚೆನ್ನಪ್ಪ ಗೌಡರ ಅಭಿಪ್ರಾಯ.

೨೦೦೫ ರಲ್ಲಿ ಪ್ರಕಟವಾದ 'ಜಾನಪದ ಲೇಖನ ಸಂಚಯ'ದಲ್ಲಿ ಹನ್ನೆರಡು ಲೇಖನಗಳಿವೆ. ಶಾಂತಿ ನಾಯಕರ ಜಾನಪದದ ವಿಸ್ತ್ರತ

ಅಧ್ಯಯನ ಕ್ಷೇತ್ರಕಾರ್ಯಕ್ಕೆ ಮತ್ತು ಅವರ ವೈಚಾರಿಕತೆಗೆ ಈ ಲೇಖನಗಳು ಸಮರ್ಪಕ ಪುರಾವೆಗಳು. 'ಕೃಷಿಕರ ಮುದ್ದಿನ ಹಬ್ಬ ದೀಪಾವಳಿ' ಯಲ್ಲಿ ಶಾಂತಿ ನಾಯಕರ ವಿಶೇಷ ನೋಟವಿದೆ. ದೀಪಾವಳಿಯನ್ನು ಎಲ್ಲರೂ ಬೆಳಕಿನ ಹಬ್ಬವೆಂದು ಖುಷಿ ಪಟ್ಟರೆ ಶಾಂತಿ ನಾಯಕರು ಇದನ್ನು ಮದ್ದುಗಳ ಹಬ್ಬವೆಂದು ಸಾದರ ಪಡಿಸಿದ್ದಾರೆ. ಕೃಷಿಕರು ಈ ಹಬ್ಬವನ್ನು ಆಚರಿಸುವ ವಿಧಾನ ಮತ್ತು ಅಲ್ಲಿ ಬಳಕೆಯಾಗುವ ವಸ್ತುಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿ ತಮ್ಮ ನಿಲುವನ್ನು ದೃಡ ಪಡಿಸಿದ್ದಾರೆ. 'ಜಟಿಗ' ಇನ್ನೊಂದು ವಿಚಾರ ಪೂರ್ಣ ಲೇಖನ. ಜಟಿಂಗ ಲಿಂಗವೇ ಲಿಂಗ ಕಲ್ಪನೆಗೂ ಮೂಲವೆಂದು ಏಕೆ ಒಪ್ಪಿಕೊಳ್ಳಬಾರದು ಎಂಬ ಅವರ ಪ್ರಶ್ನೆ ವಿಚಾರಾರ್ಹವಾದುದು. ಜನಪದರು ಆರಾಧಿಸುವ ಜಟಿಗ ಬಗ್ಗೆ ಅಧ್ಯಯನ ಪೂರ್ಣ ವಿಚಾರವನ್ನು ನೀಡಿರುವರು. ಒಗ್ಗರಣೆ, ರಂಗೋಲಿ, ಜನಪದ ಪಾನೀಯಗಳು– ಈ ಕುರಿತ ಲೇಖನಗಳು ಇಲ್ಲಿವೆ. ನಾಡವರು ಜನಾಂಗಿಕ ಅಧ್ಯಯನದಲ್ಲಿ ನಾಡವರ ಮೂಲದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಉತ್ತರ ಕನ್ನಡದ ಜಾನಪದ ಸಂಸ್ಕೃತಿ ಮತ್ತು ಇಲ್ಲಿನ ಕರಕುಶಲ ಕಲೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಉತ್ತರ ಕನ್ನಡದ ಜಾನಪದ ಸಂಸ್ಕೃತಿ ಮತ್ತು ಇಲ್ಲಿನ ಕರಕುಶಲ ಕಲೆಗಳ ಬಗ್ಗೆ ವಿವರವುಳ್ಳ ಲೇಖನಗಳೆಂದು ಇಲ್ಲಿವೆ. 'ಜನಪದ ಆಟಗಳು' ಒಂದು ಸಮಾಜ ಶಾಸ್ತ್ರೀಯ ಅಧ್ಯಯನ ಮತ್ತೊಂದು ಮಹತ್ವದ ಲೇಖನ ಒಟ್ಟಿನಲ್ಲಿ ಜಾನಪದ ಸಂಸ್ಕೃತಿಯ ವೈಚಾರಿಕ ಅನಾವರಣ ಈ ಕೃತಿಯಲ್ಲಿ ಕಂಡು ಬರುತ್ತದೆ. ಈ ಕೃತಿಯ ಬಗ್ಗೆ ವಿಶ್ಲೇಷಣೆ ಮಾಡಿದ ಡಾ। ಶ್ರೀಪಾದ ಶೆಟ್ಟಿಯವರು 'ಜಾನಪದದ ವಿವಿಧ ಕ್ಷೇತ್ರಗಳಲ್ಲಿ ಗಂಭೀರವಾಗಿ ತಮ್ಮನ್ನು ತೊಡಗಿಸಿಕೊಂಡು ನಡೆಸಿರುವ ಅಧ್ಯಯನ, ಚಿಂತನೆ, ಕ್ಷೇತ್ರಕಾರ್ಯಗಳ ಫಲಶ್ರುತಿಯಾಗಿ ಮೂಡಿ ಬಂದ ಲೇಖನಗಳ ಸಂಚಯವಾಗಿದೆ. ಎಂದು ಹೇಳಿದ ಮಾತು ಯಥಾರ್ಥವಾಗಿದೆ. ಜಾನಪದ ಲೇಖನ ಕುಂಜ ಇದು ೨೦೦೭ರಲ್ಲಿ ಪ್ರಕಟವಾದ ಕೃತಿ.

ಮಂಗರಸನ ಸೂಪಶಾಸ್ತ್ರವನ್ನು ಪರಿಚಯಿಸುವ ಅಪರೂಪದ ಲೇಖನ ಇಲ್ಲಿದೆ. ಅಮೃತ ಪಿಂಡರೆರೊಟ್ಟಿ, ಜೀಡ್ವಾಮೃತ ರೊಟ್ಟಿ ಹಾಲುಗಾರಿಕೆ, ತುಪ್ಪಗಾರಿಕೆ, ಮೊಸರೊಡೆ, ಸಿತಪಾಕದೊಡೆ, ಇಡ್ಡಲಿಗೆ, ಉಂಡಲಿಗೆ, ಕರಜಿಗೆ ಗಾರಿಕೆ–ಒಂದೆ–ಎರಡೆ ಬಹು ಬಗೆಯ ಪಾಕಗಳ ಪರಿಚಯ ಇಲ್ಲಿ ಮಾಡಿಸಿದ್ದಾರೆ. ರಂಗೋಲಿಗಳು ಬರೀ ಚಂದಕ್ಕಲ್ಲ ಜನಪದರಿಗೆ ಅವು ಅರಿಷ್ಟ ನಿವಾರಕವಾಗಿದ್ದವು ಎಂದು ಹೇಳುತ್ತಾರೆ. ರಂಗೋಲಿಗಳು ಮಾತನಾಡುತ್ತವೆ ಲೋಖನದಲ್ಲಿ ಕೃಷಿ ಮೂಲ ಸಂಸ್ಕೃತಿಯನ್ನು ಇವು ಬಿಂಬಿಸುತ್ತವೆ ಅನ್ನುತ್ತಾರೆ. ಕೃಷಿಕರ ದೇವನಾದ ಗಣೇಶ ವೇಸ ಪುರಾಣಗಳ ದೇವನಾಗಿ ಮಠ–ಮಂದಿರ ಸೇರಿದ ಉಪನ್ಯಾಸವನ್ನು ಸೋದಾ ಹರಣವಾಗಿ ವಿವರಿಸಿದ್ದಾರೆ. ಹೆಣ್ಣು ಗಂಡು ಎಂಬ ಭೇದವಿಲ್ಲದೆ ಆಡುತ್ತಿದ್ದ ಜನಪದರ ಕ್ರೀಡೆಗಳನ್ನು ಹೆಂಗಸರು ಉಳಿಸಿಕೊಳ್ಳಬೇಕಾದ ಅಗತ್ಯವನ್ನು ಮಹಿಳೆಯರ ಜಾನಪದ ಕ್ರೀಡೆಗಳು ಲೇಖನದಲ್ಲಿ ವಿವರಿಸಿದ್ದಾರೆ. 'ಜನಸಂಸ್ಕೃತಿ ಮತ್ತು ನಂಬಿಕೆ' ಬೆಲೆಯುಳ್ಳ ಲೇಖನವಾಗಿದೆ. ಜಲಕ್ಕೂ ಜನ ಜೀವನಕ್ಕೂ ಇರುವ ಸಂಬಂಧವನ್ನು ಈ ಲೇಖನ ಪ್ರತಿಪಾದಿಸುತ್ತ ಜಲ ರಕ್ಷಣೆಯ ಬಗ್ಗೆ ಎಚ್ಚರಿಸುತ್ತದೆ. ತಾರ್ಕಣೆಯ ತಾರ್ಕಣೆ ವಿ. ಗ. ನಾಯಕರ 'ತಾರ್ಕಣಿ' ಗ್ರಂಥಕ್ಕೆ ಬರೆದ ವಿಮರ್ಶೆಯಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ ಮಹಿಳಾವಾದಿ ಚಿಂತಕರಾಗಿ ನಿಂತ ಪತಿಯನ್ನು ಮೆಚ್ಚಿಕೊಳ್ಳುತ್ತಾರೆ. 'ಜಾನಪದದ ಲೇಖನ ಕುಂಜ' ಜನಪದದ ಬದುಕನ್ನು ತೆರೆದಿಡುತ್ತ ಹೆಚ್ಚಿನ ಸಂಶೋಧನೆಗೆ ನಮ್ಮನ್ನು ಆಹ್ವಾನಿಸುತ್ತದೆ. ಎನ್ನುತ್ತಾರೆ. ಈ ಕೃತಿಯನ್ನು ಸಮೀಕ್ಷಿಸಿದ ಮಾಧವಿ ಭಂಡಾರಿಯವರು.

೨೦೦೭ ರಲ್ಲಿ ಪ್ರಕಟವಾದ ಇನ್ನೊಂದು ಚಿಕ್ಕ ಹೊತ್ತಗೆ 'ಸ್ತ್ರೀ ಸಂವೇದನೆ', 'ಜಾನಪದ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಕುಟುಂಬ ವ್ಯವಸ್ಥೆ', 'ಅರ್ಥಪೂರ್ಣ ಜನಪದ ಆಚರಣೆಗಳು–ಸ್ಥಿತಿಗತಿ' ಈ ಎರಡು ಲೇಖನಗಳು ಇಲ್ಲಿವೆ. ಜನಪದ ಸಾಹಿತ್ಯದಲ್ಲಿ ನಿರೂಪಿತವಾದ ಸ್ತ್ರೀಯ

ಬದುಕು ಎಷ್ಟರ ಮಟ್ಟಿಗೆ ಸ್ತ್ರೀಪರವಾಗಿದೆ ಎಂಬುವುದರ ಕುರಿತು ಸವಿವರವಾದ ಒಂದು ಪರಿಶೀಲನೆ ಇಲ್ಲಿದೆ. ಜನಪದರೂ ಪುರುಷ ಪ್ರಧಾನ ವ್ಯವಸ್ಥೆಗೆ ತಮ್ಮನ್ನು ಒಡ್ಡಿಕೊಂಡುದರ ಬಗ್ಗೆ ಇಲ್ಲಿ ವಿಷಾದವಿದೆ. 'ಹೆಣ್ಣು ಹುಟ್ಟಿದ ಮನಿ ಹೆಗ್ಗಣತ್ತಿದಾಂಗ। ಗಂಡಸ ಮಗ ಗ.ಜಈಮ ಹುಟ್ಟಿದರ। ಬೆಲಕ ಚಿತ್ತಾರ ನಗತಾನ। ಇಂಥ ಹಾಡುಗಳ ಮೂಲಕ ಪುರುಷ ಪ್ರಧಾನ ವ್ಯವಸ್ಥೆಯ ಕರಾಳತೆ ಎಂಥದ್ದು ಎಂಬುವುದನ್ನು ಪ್ರತಿಪಾದಿಸುತ್ತಾರೆ. ಅಂಥ ಕೆಲವು ಕತೆಗಳನ್ನು ಮುಂದಿಡುತ್ತಾರೆ. ಹೀಗೆ ಹೇಳುವಾಗ ಅಲ್ಲಿರುವ ಸ್ತ್ರೀಪರ ಕಾಳಜಿಯನ್ನು ಶಾಂತಿ ನಾಯಕರು ಉಲ್ಲೇಖಿಸುತ್ತಾರೆ. ಸಮಚಿತ್ತ ದೃಷ್ಟಿ ಶಾಂತಿ ನಾಯಕರದ್ದು. ಅರಿವಿನ ಕಡೆಗೆ ಮುಖ ಮಾಡುವ ಪರಿ ಆ ಎಚ್ಚರದಿಂದ ಮಾತಾಡುತ್ತಾರೆ, ಬೆಳಕು ಹರಿಸುತ್ತಾರೆ.

**ಜನಪದ ಔಷಧೀಯ ಕೃತಿಗಳು:**

'ಜನಪದ ವೈದ್ಯಕೀಯ ಅಡುಗೆಗಳು', 'ಸಿಂಕೋನಾ', 'ಜೀವ ಉಳಿಸುವ ಕಳೆಗಳು', 'ಔಷಧ ಗಿಡಗಳ ಜೊತೆ ಪರಿಸರ ದಿನಾಚರಣೆ', 'ಜೀವ ಉಳಿಸುವ ಮರಗಳು, ಕನ್ನಡ ಜನಪದ ಸಸ್ಯನಾಮಗಳು– ಇತ್ಯಾದಿ ಹೊತ್ತಗೆಗಳು ಇಲ್ಲಿ ಉಲ್ಲೇಖನೀಯ. 'ಜನಪದ ವೈದ್ಯಕೀಯ ಅಡುಗೆಗಳು'– ಕೃತಿಯಲ್ಲಿ ಔಷಧೀಯ ಗುಣವುಳ್ಳ ಅಡುಗೆಗಳ ವಿವರವಿದೆ. ಪೇಯಗಳು, ಪಾಯಸಗಳು, ರೊಟ್ಟಿಗಳು, ಲೇಹ್ಯಗಳು, ಚಟ್ನಿ, ತುಪ್ಪ–ಎಣ್ಣೆಗಳು ತಂಬುಳಿಗಳು, ಮಾಂಸಾಹಾರ ಎಂಬುದಾಗಿ ವಿಭಾಗಿಸಿಕೊಳ್ಳಲಾಗಿದೆ. ಬೇರೆ ಬೇರೆ ಗಿಡ, ಬಳ್ಳಿಗಳು, ತಂಬುಳಿಗಳು, ಮಾಂಸಾಹಾರ– ಎಂಬುದಾಗಿ ವಿಭಾಗಿಸಿಕೊಳ್ಳಲಾಗಿದೆ. ಬೇರೆ ಬೇರೆ ಗಿಡ, ಬಳ್ಳಿ ಎಲೆ, ಹೂವು, ಹಣ್ಣು ಬೇರು– ಇವುಗಳಿಂದ ತಯಾರಿಸುವ ಅಡುಗೆ ಪ್ರಧಾನಗಳು ಮತ್ತು ರೋಗ ಉಪಶಮನ ಗುಣಗಳು– ಇವುಗಳ ಮಾಹಿತಿಯನ್ನು ಕೊಡಲಾಗಿದೆ. 'ಸಿಂಕೋನಾ' ಇನ್ನೊಂದು ಉಪಯುಕ್ತ ಪುಸ್ತಕ ಸುಮಾರು ಎಪ್ಪತ್ತೇಳು ಕಾಯಿಲೆಗಳಿಗೆ ಇಲ್ಲಿ ಮದ್ದುಗಳನ್ನು ಸೂಚಿಸಲಾಗಿದೆ. ರಸ, ಕಲಕ, ನೀರು,

ಕಷಾಯ, ಲೇಹ್ಯ, ಪುಡಿ, ಗಂಜಿ, ತಂಬುಳಿ ಎಂಬುದಾಗಿ ಮದ್ದುಗಳ ರೂಪಗಳನ್ನು ಅಧ್ಯಯನದಿಂದ ಕೂಡಿದೆ. ಔಷಧ ಗಿಡಗಳ ಜೊತೆ ಪರಿಸರ ದಿನಾಚರಣೆ ಹೊಸ ಸಾಧ್ಯತೆಯ ಕಿರು ಹೊತ್ತಗೆ, ಪರಿಸರ ದಿನಾಚರಣೆಯ ಅಂಗವಾಗಿ ವನೌಷಧಿ ಶಿಬಿರದ ಶಿಭಿರಾರ್ಥಿಯಾಗಿ ಪಶ್ಚಿಮ ಘಟ್ಟದ ಒಂದು ಹಳ್ಳಿಯಲ್ಲಿ ಸಂಚರಿಸಿ ಸಸ್ಯಗಳ ಬಗ್ಗೆ ಪಡೆದ ಅನುಭವ ಮಾಹಿತಿಗನ್ನು ಇಲ್ಲಿ ನಿರೂಪಿಸಲಾಗಿದೆ. ಶಾಂತಿ ನಾಯಕರ ದೃಷ್ಟಿಯಲ್ಲಿ ನಿರುಪಯುಕ್ತ ಸಸ್ಯಗಳೇ ಇಲ್ಲ. ಕಸದಿಂದ ರಸ ಎಂಬ ಹಾಗೆ ಕಳೆಗಳಲ್ಲೂ ಅವರು ಮದ್ದನ್ನು ಕಾಣುತ್ತಾರೆ. 'ಜೀವ ಉಳಿಸುವ ಕಳೆಗಳು'– ಈ ಪುಟ ಹೊತ್ತಗೆ ಇದಕ್ಕೆ ಪುರಾವೆ. ಜೀವ ಉಳುಸುವ ಇಪ್ಪತ್ತು ಕಳೆಗಳನ್ನು ಇಲ್ಲಿ ಪರಿಚಯಿಸಲಾಗಿದೆ. 'ಜೀವ ಉಳಿಸುವ ಮಗಳು' ಕೂಡ ಚಿಕ್ಕ ಹೊತ್ತಗೆ. ಅಂಕೋಲೆ, ಅಟ್ಟಿಲ, ಅಣಲೆ, ಅರಳಿ, ಉಪ್ಪಾಗೆ, ಕವಲ, ಕಕ್ಕೆ ಕದಂಬ– ಇತ್ಯಾದಿ ಮೂವತ್ತು ಮರಗಳ ಸಚಿತ್ರ ಮಾಹಿತಿಯನ್ನು ಇಲ್ಲಿ ಕಲೆ ಹಾಕಿದ್ದಾರೆ. ನಮ್ಮ ಉಸಿರ ರಕ್ಷಕಗಳೂ ಆಗಿವೆ' ಎಂಬುದಾಗಿ ಮರಗಳ ರಕ್ಷಣೆಯ ಬಗ್ಗೆ ಓದುಗರ ಗಮನ ಸೆಳೆಯುತ್ತಾರೆ. ವಿವೇಕ ಹೇಳುತ್ತಾರೆ.

**ಜಾನಪದ ಅಡುಗೆ ಆಹಾರ– ಪಾನೀಯ ಕೃತಿಗಳು:**

'ಹವ್ಯಕರ ಅಡುಗೆಗಳು', 'ಜನಪದ ಆಹಾರ ಪಾನೀಯಗಳು'– ಈ ಮಾಲಿಕೆಯಲ್ಲಿ ಗಮನಿಸಬೇಕಾದ ಕೃತಿಗಳು 'ಹವ್ಯಕರ ಅಡುಗೆಗಳು' ಪುಸ್ತಕದಲ್ಲಿ ಮುನ್ನೂರೈವತ್ತಕ್ಕೂ ಹೆಚ್ಚು ಬಗೆಯ ಅಡುಗೆಗಳನ್ನು ಪರಿಚಯಿಸಲಾಗಿದೆ. ಇವನ್ನು ಉಪ್ಪಿನ ಕಾಯಿ, ಕೋಸಂಬರಿ, ಹಪ್ಪಳ, ಬಾಳಕ, ಗೊಜ್ಜು, ಬಜ್ಜಿ, ಹಸಿ, ಸಾಸ್ಮೆ, ತಾಳ್ಳು, ಚಟ್ನಿ, ಪಲ್ದ್ಯ, ಹುಳಿ, ತಂಬುಳಿ, ದೋಸೆ, ಪಾಯಸ ಹೀಗೆ ಅರವತ್ತೆರಡು ಬಗೆಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಇವುಗಳಿಗೆ ಬೇಕಾಗುವ ವಸ್ತುಗಳು ಮತ್ತು ಮಾಡುವ ವಿಧಾನಗಳನ್ನು ವಿವರಿಸಲಾಗಿದೆ. ಇವನ್ನು ಹವ್ಯಕರ ಅಡುಗೆಗಳು ಎಂದು ಹೇಳಿದರೂ ಇವು ಇತರ ವರ್ಗಗಳಲ್ಲೂ ಇವೆ. ಈ ಅಡುಗೆ ಪ್ರಕಾರಗಳನ್ನು

ಶ್ರೀಮತಿ ಸರಸ್ವತಿ ಈಶ್ವರ ಹೆಗಡೆಯವರಿಂದ ಸಂಗ್ರಹಿಸಿದ್ದಾಗಿ ಹೇಳಿದ್ದಾರೆ. ಪ್ರಸ್ತಾವನೆಯಲ್ಲಿ ಅಡುಗೆಯ ಬಗ್ಗೆ ವಿದ್ವತ್ಪೂರ್ಣವಾಗಿ ವಿಶ್ಲೇಷಿಸಲಾಗಿದೆ. ಕರಾವಳಿಯ ಅಡುಗೆಯ ವಿಶೇಷಗಳು ಇಲ್ಲಿವೆ. ಅಡುಗೆ ಪರಿಸರ ಚಿತ್ರಗಳನ್ನು ಕೊಟ್ಟಿರುವುದರಿಂದ ಇದರ ಉಪಯುಕ್ತತೆ ಇನ್ನೂ ಹೆಚ್ಚಿದೆ. 'ಜನಪದ ಆಹಾರ ಪಾನೀಯುಗಳು' ಮುಖ್ಯವಾಗಿ ಪಾನೀಯುಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಆರೋಗ್ಯಕರ ಪಾನೀಯಗಳನ್ನು ತಯಾರಿಸುವ ವಿಧಾನ ಮತ್ತು ಬೇಕಾಗುವ ವಸ್ತುಗಳ ಕುರಿತು ವಿವರಿಸಿದ್ದಾರೆ. ಅನೇಕ ವಿಧದ ಕಷಾಯಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಇವೆಲ್ಲ ಜನಪದರ ಸುತ್ತ ಮುತ್ತಲೂ ಇರುವ ಬಗೆ ಬಗೆಯ ಸಸ್ಯಗಳನ್ನು ರಕ್ಷಿಸಿಕೊಳ್ಳಬೇಕು ಎಂಬ ಎಚ್ಚರವೂ ಇಲ್ಲಿದೆ. ಶಾಂತಿ ನಾಯಕರ ಮುಖ್ಯ ಕಾಳಜಿಯೂ ಕೂಡ ಅದೇ ಆಗಿದೆ.

**ಜನಪದ ಪರಿಚಯಾತ್ಮಕ ಕೃತಿಗಳು:**

ಜನಪದದ ಕುರಿತು ಶಾಂತಿ ನಾಯಕರು ರಚಿಸಿದ ಕೃತಿಗಳನ್ನು ಕರಾರುವಕ್ಕಾಗಿ ವಿಂಗಡಿಸಿ ಹೇಳುವುದು ಸುಲಭವಲ್ಲ. ಯಾಕೆಂದರೆ ಒಂದು ವಿಭಾಗದಲ್ಲಿ ಇನ್ನೊಂದು ವಿಭಾಗದ ವಿಷಯವೂ ಅಂತರ್ಗತವಾಗಿರುತ್ತದೆ. ಬಹುಶಃ ಜಾನಪದವೇ ಹಾಗೆ ಒಂದರೊಳಗೆಗೊಂದು ಬೆಸೆದುಕೊಂಡೇ ಇರುತ್ತದೆ. ಇಲ್ಲಿ ಪರಿಚಯಾತ್ಮಕ ಕೃತಿಗಳಲ್ಲೂ ಅದನ್ನೇ ಕಾಣುತ್ತೇವೆ. ಜನಪದ ಗಣಿತ, ನಮ್ಮೂರ ಜನಪದ ಗಣಿತ, ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಆಭರಣಗಳು ಕರ್ಕಿಯ ಸಾಂಸ್ಕೃತಿಕವಾಗಿ ಇದರ ಕೊಡುಗೆ ಅಪಾರವೆ. ಸಾಹಿತ್ಯ ಮತ್ತು ಯಕ್ಷಗಾನ, ಸ್ವಾತಂತ್ರ್ಯ ಹೋರಾಟ– ಇತ್ಯಾದಿ ಕ್ಷೇತ್ರಗಳಲ್ಲಿ ದುಡಿದ ಸಾಧಕರನ್ನು ಇಲ್ಲಿ ಅವರ ಸಾಧನೆಯೊಂದಿಗೆ ಪರಿಚಯಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಕ್ರಿಯವರು ಜಾನಪದಕ್ಕೆ ದೊಡ್ಡ ಸಮುದ್ರವೆ. ಅವರನ್ನು ಶಾಂತಿ ನಾಯಕರು ಹೃದ್ಯವಾಗಿ ಪರಿಚಯಿಸಿದ್ದಾರೆ. ಕರಾವಳಿಯ ಗ್ರಾಮೀಣರು ತೊಡುವ ಸುಮಾರ

ಆಭರಣಗಳನ್ನು ಇಲ್ಲಿ ಪರಿಚಯಿಸಿದ್ದಾರೆ. ಇವು ಒಂದೊಂದೂ ಅತ್ಯಂತ ಉಪಯುಕ್ತ ಕೃತಿಗಳಾಗಿವೆ.

**ಜಾನಪದೇತರ ಕೃತಿಗಳು:**

ಶಾಂತಿ ನಾಯಕರು ನವಸಾಕ್ಷರರಿಗಾಗಿ ಕೆಲವು ಹೊತ್ತಗೆಗಳನ್ನು ರಚಿಸಿರುವರು. ರಂಗೋಲಿ, ಕುಡಿತ, ನಿಮಗೆಷ್ಟು ಹಿತ, ಬೆಣ್ಣು ಇಟ್ಟುಕೊಂಡ ತುಪ್ಪಕ್ಕೆ ಹುಡುಕುವುದು, 'ದೇವಕಿ ಓದಿದಳು', ದೋಣಿ ಹೇಳಿದ ಕತೆ'– ಈ ಕೃತಿಗಳೆಲ್ಲ ಶಾಂತಿ ನಾಯಕರ ಸೃಜನಶೀಲತೆಗೆ, ಸಾಮಾಜಿಕ ಕ್ಷಾಳಜಿ ದುಶ್ಚಟಗಳಿಂದ ಪಾರಾಗಿ ಉತ್ತಮ ಜೀವನದ ಹಾದಿಯಲ್ಲಿ ನಡೆಯಲು ಪ್ರೇರೇಪಿಸುತ್ತಾರೆ. ಸರಳ ಶೈಲಿ ಸುಂದರ ನಿರೂಪಣೆ ಇಲ್ಲಿಯ ಗುಣಾಂಶವಾಗಿದೆ. ಕರಾವಳಿಯ ಗ್ರಾಮೀಣರು ತಮ್ಮ ಬದುಕನ್ನು ತಾವು ನೋಡಿಕೊಳ್ಳುವಂತೆ ತಮ್ಮನ್ನು ತಾವು ಸರಿಪಡಿಸಿಕೊಳ್ಳುವಾಂತೆ ಆ ಪ್ರಜ್ಞೆ ಮೂಡಿಸುವ ಕ್ರಿಯೆಗೆ ಒಡ್ಡಿ ಕೇಳೂತ್ತವೆ ಈ ಕೃತಿಗಳು.

ಚಿನ್ನದ ಚೆನ್ನ, ಆಸರ, ಸಜ್ಜನ, ಉತ್ತರ ಕನ್ನಡ ಜಿಲ್ಲೆಯ ಸಣ್ಣ ಕತೆಗಳು– ಇವು ಶಾಂತಿ ನಾಯಕರ ಸಂಪಾದಕತ್ವದಲ್ಲಿ ಪ್ರಕಟವಾದ ಗ್ರಂಥಗಳು, ಸ್ಮರಣ ಸಂಸಿಕೆಗಳು ಆವಾವ ಸಂದರ್ಭಕ್ಕೆ ತಕ್ಕಂತೆ ಔಚಿತ್ಯಕೂರ್ಣವಾಗಿ ಇವನ್ನು ಸಂಪಾದಿಸಿರುವರು. ಜವಾಬ್ದಾರಿಯುಳ್ಳ ಉತ್ತಮ ಸಂಪಾದಕರು ಎಂಬುವುದಕ್ಕೆ ಈ ಹೊತ್ತಗೆಗಳು ಸಾಕ್ಷಿಯಾಗಿದೆ.

**ಪ್ರಶಸ್ತಿ– ಪುರಸ್ಕಾರಗಳು:**

ಸಮಾಜ– ಸರಕಾರ ಶಾಂತಿ ನಾಯಕರ ಸಾಧನೆಗಳನ್ನು ಗಮನಿಸಿದೆ; ಪುರಸ್ಕರಿಸಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 'ಜಾನಪದ ತಜ್ಞೆ' ಪ್ರಶಸ್ತಿ ನೀಡಿದೆ. ೧೯೮೮ರ ಪ್ರಶಸ್ತಿ ಪಡೆದ ಮೊದಲ ಮಹಿಳೆ ಅವರು ಕನ್ನಾದ ಸಾಹಿತ್ಯ ಮಲ್ಲಿಕಾ ಪ್ರಶಸ್ತಿ (೧೯೮೨) ಪದ್ಮಭೂಷಣ ಡಾ। ಬಿ. ಸರೋಜದೇವಿ ಸಾಹಿತ್ಯ ಪ್ರಶಸ್ತಿ

(೨೦೧೦) ಜಿಲ್ಲಾ ಉತ್ತಮ ಶಿಕ್ಷ ಪ್ರಶಸ್ತಿ (೧೯೯೫) ಜಿಲ್ಲಾ ಉತ್ತಮ ಲೇಖಕಿ ಪ್ರಶಸ್ತಿ (೧೯೯೮) ಇವುಗಳಿಂದ ಗೌರವ ಹೊಂದಿರುವವರು.

ಸುಮುಖ ಪ್ರಕಾಶ ವೇದಿಕೆ, ಸ್ಮೃತಿ ಪ್ರಕಾಶನ, ಲಲಿತಾಂಬ ವೃಷಬೇಂದ್ರ ಸ್ವಾಮಿ ದತ್ತಿನಿಧಿ ಕನ್ನಡ ಕ್ರಿಯಾ ಸಮಿತಿ, ಲಯಸೆನ್‌ಕ್ಲಬ್, ಕರ್ನಾಟಕ ಸಂಘ, ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತು. ಶರಾವತಿ ಸಂಸ್ಕೃತಿ ವೇದಿಕೆ– ಇವುಗಳಿಂದ ಸನ್ಮಾನಗೊಂಡಿರುವವರು.

ದೀಪಾರಾಧನೆ, ಕಲಶ, ಜಾನಪದ ಬೆಳ್ಳಿ ದೀಪಾರಾಧನೆ, ಮರುದಿಬ್ಬಣ ಇವು ಶಾಂತಿ ನಾಯಕರಿಗೆ ಅರ್ಪಿಸಿದ ಅಭಿನಂದನ ಗ್ರಂಥಗಳು.

ಇಳಿ ವಯಸ್ಸಿನಲ್ಲೂ ಶಾಂತಿ ನಾಯಕರು ಕ್ರಿಯಾ ಶೀಲರೆ. ಜಾನಪದ ಕಾಯಕ, ಸಮಾಜ ಸೇವಾ ಕಾರ್ಯಗಳಲ್ಲಿ ಅವರು ಸದಾ ಸಕ್ರಿಯರು. ಈಗಾಗಲೇ ಅರರು ಸಿದ್ಧಪಡಿಸಿದ ಸುಮಾರು ಹದಿನೈದರಷ್ಟು ಕೃತಿಗಳನ್ನು ಪ್ರಕಟನೆಗೆ ಸಿದ್ಧವಾಗಿದೆ. ನಿರಂತರ ದುಡಿಮೆಯ ಶಾಂತಿ ನಾಯಕರು ಕನ್ನಡ ಜಾನಪದಕ್ಕೆ ಇಂದು ವರ.

ಜಾನಪದ ತಜ್ಞೆ

# ಶಾಂತಿ ನಾಯಕ

ಜನಪದರ ಬದುಕಿಗೆ ಕಣ್ಣಾಗಿರುವ ಶಾಂತಿ ನಾಯಿಕರು ನುಡಿದ ಸಾರಭೂತ ನುಡಿ: ಕಟ್ಟಿದ ತೋರಣ ಸಾಹಿತ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಹಿಳೆಯರು ತೊಡಗಿಕೊಂಡರೂ ಜನಪದದಲ್ಲಿ ಮಾತ್ರ ಅವರ ಸಂಖ್ಯೆ ವಿರಳವೆ. ಆ ವಿರಳರ ಸಾಲಲ್ಲಿ ಹೊಳೆವ ಉಜ್ವಲ ಬೆಳಕು ಶಾಂತಿ ನಾಯಿಕರು. ಜನಪದರ ಒಡಲಿಂದಲೇ ಮೂಡಿ ಬಂದ ಅವರು ಈ ಕಡಲಲ್ಲಿ ಸಂಚರಿಸುವ ಹಡಗಾದುದು. ಕನ್ನಡಕ್ಕೆ ಕೊಡುಗೆಯೆ. ಆಧುನಿಕತೆಯ ಪ್ರಭಾವದಿಂದ ಜನಪದರ ಬದುಕು ಒಂದೊಂದಾಗಿ ಮರೆಯಾಗುತ್ತಿರುವ ಸಂದರ್ಭದಲ್ಲಿ ಅವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಶಾಂತಿ ನಾಯಿಕರು ಮಾಡಿದ ದುಡಿಮೆ ಗಣನೀಯವಾದುದು. ಅಷ್ಟೇ ಅಲ್ಲ, ಜನಪದರ ನಡುವೆಯಿಟ್ಟ ಅವರ ಬದುಕನ್ನು ಕಟ್ಟುವುದರ ಕಡೆಗೆ ಕೊಟ್ಟ ಗಮನ ಮಾಡಿದ ಸೇವಾಕಾರ್ಯ ಜನಪದ ತಜ್ಞೆಯ ಜನಪರ ದೃಷ್ಟಿಗೆ ಉತ್ತಮ ನಿದರ್ಶನ.

**ಕರ್ನಾಟಕ ಜಾನಪದ ಪರಿಷತ್ತು**

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೬೦
E-mail : janapadaparishath@hotmail.com